ರಾಷ್ಟ್ರಭಕ್ತಿ ಮಾನಸ

(ಗೀತ, ನಾಟಕ, ಯಕ್ಷಗಾನ)

ಪ್ರೊ. ಟಿ. ಕೇಶವ ಭಟ್ಟ

ರಾಷ್ಟ್ರಭಕ್ತಿ ಮಾನಸ

(ಗೀತ, ನಾಟಕ, ಯಕ್ಷಗಾನ)

ಪ್ರೊ. ಟಿ. ಕೇಶವ ಭಟ್ಟ

ಇದು ರಾಷ್ಟ್ರಭಕ್ತಿ ಮಾನಸ
ವಿದು ಸಂಘದ ಶಕ್ತಿ ರಾಮರಾಜ್ಯಸ್ಥಿತಿಗಾ
ಸ್ಪದಮುಮಧರ್ಮಚ್ಛಿದಿಯು
ಭ್ಯುದಯದ ನಿಶ್ರೇಣಿ ರಾಷ್ಟ್ರಭಕ್ತಿ ವರೇಣ್ಯಂ ।

ಚಿರಸಾಹಿತ್ಯ ಪ್ರಕಾಶನ
754, ಹದಿನೈದನೆ ಮುಖ್ಯರಸ್ತೆ,
ಬನಶಂಕರಿ ಎರಡನೆ ಹಂತ,
ಬೆಂಗಳೂರು-560 070

RASTRABHAKTI MANASA — Fountain head of Patriotism, contains 3 Literary Forms-(1) Sangha Shakti-a Patriotic Poem in 5 cantos of Rhythmic Rhyme variety (2) Ramarajya—a show of 6 scenes and (3) Afjulakhana Vadhe-Annihilation of a Historic Villain in Yakshagana Poem, Authored by : Prof. T. Keshava Bhat, M.A., B.O.L., Vidvan, Visharada.

Size : 1/8 Crown, Pages : xvi + 88

1st Edition, Oct. 1996

No. Copies : 1000

Price : Rs. 25-00

(C) T. Keshava Bhat

Publishers :
Chirasahitya Prakashana
754, 15th Main,
Banashankari II Stage,
Bangalore-560 070

Printers :
Sri Shuprabha Printers
24, 2nd Cross,
Kalappa Block, Srinagar,
Bangalore-560 050

ಅ ರಿ ಕೆ

ರಾಷ್ಟ್ರಭಕ್ತಿಮಾನಸ ಎಂಬ ಶ್ರವ್ಯ-ದೃಶ್ಯ ಸಾಹಿತ್ಯಕೃತಿಯನ್ನು ಸಹೃದಯರ ಮುಂದಿಡಲು ಸಂತೋಷಪಡುತ್ತೇನೆ. ಇದರಲ್ಲಿ ಮೂರು ರಚನೆಗಳಿವೆ. ಮೊದಲನೆಯದು—**ಸಂಘಶಕ್ತಿ.** ಇದು ರಾಷ್ಟ್ರೀಯ ಸಂಘಟನೆಯ ಮತ್ತು ಅದರ ಸತ್ಯವಿಜಯದ ಕಥನಗೀತ. ಬೇರೆ ಬೇರೆ ಧಾಟಿಯ ಲಯ ವಿನ್ಯಾಸದ ಗೇಯಗುಣವುಳ್ಳ ಐದು ಪರ್ವಗಳಿಂದ ಕೂಡಿದೆ. ಎರಡನೆಯದು—ತಾತ್ತ್ವಿಕವಾಗಿ ಮೊದಲನೆಯದರ ಪರಿಣಾಮವೆನಿಸುವ **ರಾಮರಾಜ್ಯ** ಎಂಬ ರೂಪಕ (ನಾಟಕ). ಆರು ದೃಶ್ಯಗಳಿಂದ ಕೂಡಿದ ಇದರ ಕಥಾವಸ್ತು ಕಾಲ್ಪನಿಕ, ಮೂರನೆಯದು—ಹಿಂದುಧರ್ಮದ ಸಾಂಸ್ಕೃತಿಕ ಲಕ್ಷಣವಾಗಿರುವ ಶಿಷ್ಟರಕ್ಷಣೆ ಮತ್ತು ದುಷ್ಟರ ನಾಶ ಎಂಬ ತತ್ತ್ವವನ್ನೆತ್ತಿಹಿಡಿಯುವ ಐತಿಹಾಸಿಕ ಕಥಾವಸ್ತುವಿಂದೊಪ್ಪುವ ಅಫಜುಲಖಾನವಧೆ ಎಂಬ ಯಕ್ಷಗಾನ ಪ್ರಸಂಗ, ದೃಶ್ಯಕಾವ್ಯ. ರಾಷ್ಟ್ರಭಕ್ತಿಪ್ರವಾಹದ ಉಗಮಸ್ಥಾನವೆಂಬುದರಿಂದ ಮತ್ತು ರಾಷ್ಟ್ರಭಕ್ತಿಮನಸ್ಸೆಂಬುದು ಸರ್ವೋನ್ನತಿಗೆ ಸಾಧನವೆಂಬ ಭಾವನೆಯಿಂದ ಈ ಕೃತಿ **ರಾಷ್ಟ್ರಭಕ್ತಿ ಮಾನಸ** ಎನಿಸಿದೆ.

ಪ್ರತಿಯೊಬ್ಬ ರಾಷ್ಟ್ರೀಯನಲ್ಲಿ ಇರಬೇಕಾದ ತ್ರಿಕರಣಾತ್ಮಕ ಕಾರ್ಯಶಕ್ತಿ ರಾಷ್ಟ್ರಭಕ್ತಿ. ಅದು ಧರ್ಮದ ಮುಖ್ಯ ಅಂಗ. ಮಾನವ ಜೀವನದ ಯಾವುದೇ ಭಾಗದಿಂದ ಧರ್ಮವನ್ನು ತ್ಯಜಿಸುವುದು ಅಥವಾ ದೂರವಿಡುವುದು ಆಸುರೀ ಪ್ರವೃತ್ತಿ ಹಾಗೂ ಆತ್ಮಹಾನಿಕರ. ಆದುದರಿಂದ ಧರ್ಮರಕ್ಷಣೆ ನಮ್ಮ ರಕ್ಷಣೆಗಾಗಿ ನಮ್ಮ ಕರ್ತವ್ಯ :— **ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ.** ಧರ್ಮದಿಂದಲೇ ಅಭ್ಯುದಯ ನಿಃಶ್ರೇಯಸ (ಮೋಕ್ಷ) ಗಳು. ನಿಃಶ್ರೇಯಸಕ್ಕೆ ಭಗವದ್ಭಕ್ತಿ ವಿಶೇಷಸಾಧನವಾಗಬಹುದು. ಅಭ್ಯುದಯಕ್ಕೆ ರಾಷ್ಟ್ರಭಕ್ತಿ ಪರಮಸಾಧನವಾಗಿದೆ. ಆದರಿಂದಲೇ ದೇಶದಲ್ಲಿ, ಸಮಾಜದಲ್ಲಿ—ಸಾಮರಸ್ಯ ಸೌಹಾರ್ದ, ಜ್ಞಾನ, ಶಾಂತಿ, ಸಮೃದ್ಧಿಗಳಾಗುವುವು. ನಿಜವಾದ ಅರ್ಥದಲ್ಲಿ ಅದೇ ಜಾತ್ಯತೀತ (ಸೆಕ್ಯುಲರ್) ಸಿದ್ಧಾಂತ, ಅದೇ ಹಿಂದುತ್ವ. ವಿಶ್ವಮಾನ್ಯ ಧರ್ಮ ಸಂಸ್ಕೃತಿಗಳ ಪ್ರತೀಕವಾಗಿರುವ ಹಿಂದು, ಹಿಂದುತ್ವ ಎಂಬ ಭಾರತದ

ರಾಷ್ಟ್ರೀಯ ಶಬ್ದಗಳನ್ನು-ಮುಖಸಿಂಡರಿಸಿ, ಬಾಯ್ಗೆ ಬಂದಂತೆ ಬೈದು ಧಿಕ್ಕರಿಸು ವಷ್ಟು ಕೊಳೆತ ಮನಸ್ಸಿನ ರಾಜಕೀಯ ಧುರೀಣಂಮನ್ಯರಿದ್ದಾರೆ. ಅಂಥವರು ಸ್ವತಃ ಹಿಂದುವೇ ಆಗಿದ್ದು ತಮ್ಮ ರಾಷ್ಟ್ರೀಯುವೆನಿಸುವ ಭಾಷಣಗಳಲ್ಲಿ ಹಿಂದುತ್ವ ಪ್ರತಿಪಾದನೆಯನ್ನು ಬಯ್ದುಬಾಯಲ್ಲೇ ಕೊನೆಗೆ **ಜೈಹಿಂದ್**— ಅಂದರೆ **'ಹಿಂದುತ್ವಕ್ಕೆ ಜಯವಾಗಲಿ'** ಎಂದು ಘೋಷಣೆ ಮಾಡುವುದನ್ನು ಕಾಣುತ್ತಿದ್ದೇವೆ. ಇದನ್ನು ಅವರ ಭಾಷಿಕ ಬೌದ್ಧಿಕ ಭ್ರಷ್ಟಾಚಾರವೆನ್ನದೆ, ಬೇರೆ ಏನೆನ್ನಬೇಕು ? ವಾಸ್ತವಿಕ ಅರ್ಥದಲ್ಲಿ ಜಾತ್ಯತೀತ ತತ್ತ್ವವೇ ಹಿಂದುತ್ವ ವಾಗಿದ್ದರೂ ಸಾತ್ವಿಕ, ದೈವಿಕ ಶುದ್ಧಾಂತಃಕರಣಗಳಿಗೆ ಮಾತ್ರ ಇದು ಬೋಧ್ಯ ಮತ್ತು ಸಂವೇದ್ಯವೆಂದರಿಯಬೇಕಾಗುತ್ತದೆ.

ಈ ಪುಸ್ತಕದಲ್ಲಿರುವ ಮೂರು ರಚನೆಗಳು 1950 ಕ್ಕೆ ಹಿಂದೆಯೇ (ಯಕ್ಷಗಾನ ಮತ್ತು ನಾಟಕ 1947, ಕಥನಗೀತ 1948-49) ಆಗಿದ್ದುವು. ಆದರೆ ಪ್ರಕಾಶಕರು ದೊರೆಯದೆ ಇದುತನಕ ತಣ್ಣಗೆ ಉಳಿಯಿತು. ಇನೂ ಹೀಗೆ ಇಟ್ಟಿರುವುದು ಆತ್ಮದ್ರೋಹವಾಗುವುದೆಂಬ ಅರಿವಿನಿಂದ ಲೇಖಕನೇ ಪ್ರಕಾಶಕನೂ ಆದನೆಂದು ತಿಳಿಯಬಹುದು.

ಭಾರತದಲ್ಲಿ ರಾಷ್ಟ್ರಭಾವನೆ ವೇದದಷ್ಟೇ ಪ್ರಾಚೀನವಾದರೂ ಈ ಅರಿವು ಈಗಿನವರಲ್ಲಿ ಹೆಚ್ಚಿನವರಿಗೂ ಇಲ್ಲವಾಗಿದೆ. ಜನಸಾಮಾನ್ಯನಿಂದ ಮಹಾವಿದ್ವಾಂಸರ ವರೆಗೆ, ದಿನಗೂಲಿಯವನಿಂದ ಮಹಾ ಅಧಿಕಾರಿಯ ವರೆಗೆ, ಉದ್ಯೋಗಿಯಿಂದ ಉದ್ಯಮಪತಿಯಿಂದ ಮಂತ್ರಿವರ್ಗದಿಂದ ರಾಷ್ಟ್ರಾಧ್ಯಕ್ಷರ ತನಕ, ಅಲ್ಪಸಂಖ್ಯಾ ಬಹುಸಂಖ್ಯಾ ತಾರತಮ್ಯವಿಲ್ಲದೆ ಭಾಷೆ ಜಾತಿ ಪಂಗಡ ಪ್ರಾಂತ ಪ್ರದೇಶ ಭೇದವಿನಿತಿಲ್ಲದೆ, ಸಕಲ ಭಾರತೀಯರೂ ರಾಷ್ಟ್ರಭಕ್ತಿಮಾನಸ ರಾಗುವುದು ಅವರವರ ಬದುಕಿನಷ್ಟೇ ಮುಖ್ಯ ಮತ್ತು ಅನಿವಾರ್ಯ. ಆದುದರಿಂದ ಹಾಗೆ ಆಗಲು ಒಂದಿಷ್ಟು ಪ್ರೇರಣೆ ಈ ಕೃತಿಯಿಂದಾಗುವುದೆಂದು ನಂಬಿದ್ದೇನೆ. ಒಬ್ಬೊಬ್ಬರಾಗಿ ಉಜ್ವಲ ರಾಷ್ಟ್ರಭಕ್ತರಾಗುವುದಲ್ಲದೆ, **ಏಕ ದೀಪ ದೂಸರೇ ಜಲಾವೇ ಐಸೇ ಅಗಣಿತ ಹೋವೇ** — ಒಂದು ದೀಪ ಇನ್ನೊಂದನ್ನು ಉರಿಸಲಿ, ಹಾಗೆಯೇ ಉರಿವ ದೀಪ ಅಸಂಖ್ಯವಾಗಲಿ !— ಎಂಬ ರಾಷ್ಟ್ರಭಕ್ತಿಗೀತದ ವಾಕ್ಯದಂತೆ ಒಬ್ಬರು ಇನ್ನೊಬ್ಬರಿಗೆ ರಾಷ್ಟ್ರಭಕ್ತಿ ಪ್ರೇರಕರಾಗಿ ಮುಂದಣ ರಾಮರಾಜ್ಯಕ್ಕೆ ಬುನಾದಿಯಾಗುವಂತೆ ಆಶಿಸುತ್ತೇನೆ.

ಈ ಕೃತಿಗೆ ಮುನ್ನುಡಿಯನ್ನು ಬರೆದವರು—ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣಭಾರತದ (ತಮಿಳುನಾಡು, ಕೇರಳ, ಕರ್ನಾಟಕ ರಾಜ್ಯಗಳ) ಕ್ಷೇತ್ರೀಯ ಪ್ರಚಾರಕರೂ ರಾಷ್ಟ್ರಭಕ್ತ ವಿದ್ವಾಂಸರೂ ಆಗಿರುವ ಶ್ರೀ ನ. ಕೃಷ್ಣಪ್ಪ, ಎಂ.ಎ., (ಸಂಸ್ಕೃತ) ಆನರ್ಸ್ ಅವರು. ಆಶಂಸೆಯನ್ನಿತ್ತ ವರು—ವಿಕ್ರಮ ಎಂಬ ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯ ಸಂಪಾದಕರೂ ರಾಷ್ಟ್ರೀಯ ಚೇತನರೂ ಆಗಿರತಕ್ಕ ಶ್ರೀ ಸು.ನಾ. ಮಲ್ಯರು, ಶುಭಾಶಯ ನೀಡಿ ದವರು ನನ್ನ ಪ್ರೀತಿಯ ಅಣ್ಣನವರಾದ ವಿದ್ವಾನ್ ತಾಳ್ತಜೆ ಕೃಷ್ಣ ಭಟ್ಟರು. ಇವರೆಲ್ಲರಿಗೂ ಹಾರ್ದಿಕ ಕೃತಜ್ಞತಾಪೂರ್ವಕ ಅಭಿವಂದನೆಗಳು. ಕೃತಿಯನ್ನು ಅಂದವಾಗಿ ಮುದ್ರಿಸಿದ ಶ್ರೀ ಶುಪ್ರಭಾ ಪ್ರಿಂಟರ್ಸ್ ಮಾಲಿಕರಾದ ಶ್ರೀ ಪಿ. ಎಲ್. ಶುಕಯೋಗಿ ಅವರಿಗೂ ಅವರ ಸಹಕಾರಿಗಳಿಗೂ ಅಭಿನಂದನೆಗಳು.

ಪ್ರೊ. ಟಿ ಕೇಶವ ಭಟ್ಟ
754, 'ಶ್ರೀವರ್ಧನ' 15 ನೇ ಮುಖ್ಯರಸ್ತೆ,
ಬನಶಂಕರಿ 2 ನೆಯ ಹಂತ,
ಬೆಂಗಳೂರು–560 070

ವಿಜಯದಶಮಿ
೨೧–೧೦–೧೯೯೬

ಪರಿವಿಡಿ

ಅರಿಕೆ, ಪರಿವಿಡಿ, ಆಶಂಸೆ, ಮುನ್ನುಡಿ,
ಶುಭಾಶಯ, ಪ್ರಸ್ತಾವನೆ ಪುಟ : i....xvi

೧. ಸಂಘಶಕ್ತಿ (ಕಥನಗೀತ) ೧—೨೬

೨. ರಾಮರಾಜ್ಯ (ರೂಪಕ) ೨೭—೭೦

೩. ಅಫಜುಲಖಾನವಧೆ (ಯಕ್ಷಗಾನ) ೭೧—೮೮

ರಾಷ್ಟ್ರಕಲ್ಪನೆ, ದೇಶಭಕ್ತಿ — ಇವು ಭಾರತೀಯರಿಗೆ ಬ್ರಿಟಿಷರ ಕೊಡುಗೆ' ಎಂಬುದು ಆಂಗ್ಲ ದಾಸ್ಯಭಾವದ ಪಳೆಯುಳಿಕೆಯ ಅಜ್ಞಾನ. ವಿಶ್ವದಲ್ಲೇ ಅತಿ ಪ್ರಾಚೀನ ಸಾಹಿತ್ಯವಾದ ಋಗ್ವೇದದ ನಾಲ್ಕನೆಯ ಅಷ್ಟಕದ ಭಾಗದಲ್ಲಿರುವ ೧೫ ಮಂತ್ರಗಳುಳ್ಳ ಶ್ರೀ ಸೂಕ್ತದಲ್ಲಿ ಈ ವಾಕ್ಯವಿದೆ :— "ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ"— ನಾನು ಈ ರಾಷ್ಟ್ರದಲ್ಲಿ ಜನ್ಮತಾಳಿದವನು. ತಾಯೇ, ನಿನ್ನ ಆಜ್ಞಾನುವರ್ತಿಯಾದ ಕುಬೇರನು ನನಗೆ ಕೀರ್ತಿಯನ್ನೂ ಐಹಿಕ ಅಭ್ಯುದಯವನ್ನೂ ದಯೆಪಾಲಿಸಲಿ".

ತ್ರೇತಾಯುಗದ ರಾಷ್ಟ್ರಪುರುಷ ಶ್ರೀರಾಮನ ಮುಖವಾಣಿ

"ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥

ಆ ಶಂ ಸೆ

ಪ್ರೊ. ಟಿ. ಕೇಶವ ಭಟ್ಟರು ಸಂಸ್ಕೃತ ಹಾಗೂ ಕನ್ನಡ ಭಾಷಾವಿದ್ವಾಂಸರು, ಯಕ್ಷಗಾನಕಲೆಯಲ್ಲಿ ನುರಿತವರು. ಸ್ವೀಕೃತ ಧ್ಯೇಯ ಸಿದ್ಧಾಂತಗಳಿಗೆ ಅನುಗುಣವಾಗಿ ನಡೆಯುವ ಧೀರರು. ಈ ತ್ರಿವಿಧ ರಸಗಳಿಂದ ಪರಿಪೂರ್ಣಗೊಂಡು ಹೊರಹೊಮ್ಮಿರುವ ಅವರ ಕೃತಿ **'ರಾಷ್ಟ್ರಭಕ್ತಿ ಮಾನಸ'**ವು ಇಂದು ನಮ್ಮ ಸಮಾಜದಲ್ಲಿ ಕಿರಿಯರಿಂದ ಹಿರಿಯರ ವರೆಗೆ ಎಲ್ಲರಲ್ಲೂ ಎದ್ದು ಕಾಣಬೇಕಾದ ದೇಶಭಕ್ತಿ, ಧರ್ಮಾಸಕ್ತಿ, ಸಾಹಸ ಶೌರ್ಯಭರಿತ ದೈವಿಕಶಕ್ತಿಗಳನ್ನು ಪ್ರೇರೇಪಿಸುವಲ್ಲಿ ಒಂದು ಉಪಯುಕ್ತ ಸಾಧನವಾಗಿದೆ. ಅದನ್ನು ಉಪಯೋಗಿಸಿ, ಅದರ ಲಾಭವನ್ನು ಪಡೆಯುವ ಉತ್ಸಾಹವನ್ನು ನಮ್ಮ ಸಮಾಜಬಂಧುಗಳು ತೋರಿಸುವ ವಿಶ್ವಾಸ ನನಗಿದೆ. ಈ ನಿಟ್ಟಿನಲ್ಲಿ ವಿದ್ವಾನ್ ಕೇಶವ ಭಟ್ಟರ ಈ ಪರಿಶ್ರಮವು ಫಲದಾಯಕವಾಗಲಿ ! ಎಂದು ಆಶಿಸುತ್ತೇನೆ.

ಸು. ನಾ. ಮಲ್ಯ

14–8–1996

ಸಂಪಾದಕರು, 'ವಿಕ್ರಮ' ಬೆಂಗಳೂರು

ಮುನ್ನುಡಿ

ನನ್ನ ಆತ್ಮೀಯ ಮಿತ್ರರಾದ ವಿದ್ವಾನ್ ಶ್ರೀ ಟಿ. ಕೇಶವ ಭಟ್ಟರು ನಲ್ವತ್ತಾರು ವರ್ಷಗಳ ಮೊದಲು ಅವರ ತಾರುಣ್ಯದಲ್ಲಿ ಬರೆದು, ಈಗ ಪ್ರಕಟಿಸುತ್ತಿರುವ ಕಾವ್ಯ ನಾಟಕಗಳಿಗೆ ನನ್ನಿಂದ ಮುನ್ನುಡಿ ಬರೆಸುತ್ತಿದ್ದಾರೆ, ನನ್ನ ಮೇಲಿನ ಅಭಿಮಾನ, ಅದಕ್ಕಿಂತ ಮಿಗಿಲಾಗಿ ಪುಸ್ತಕದ ವಸ್ತು ನನ್ನಂತಹ ಎಲ್ಲರಿಗೆ ತುಂಬ ಸಂತಸ ನೀಡುವುದೆಂಬ ಆಸೆಯಿಂದ ನನಗೆ ಈ ಹೊಣೆ ಒಪ್ಪಿಸಿದ್ದಾರೆ ಎಂದು ನಾನು ಭಾವಿಸಿರುವೆ. ಕಿರಿಯರನ್ನು ಬೆಳಸಿ ಮೇಲೆ ತಂದು ಜನಪ್ರಿಯರನ್ನಾಗಿ ಮಾಡುವ ಆರ್ಷ ಪರಂಪರೆಗೆ ನಮ್ಮ ಕೇಶವ ಭಟ್ಟರೂ ಒಂದು ಮಾದರಿ.

೧೯೪೮-೪೯ರ ದಿನಗಳು ಭಾರತ ದೇಶದ ಜೀವನದಲ್ಲಿ ತುಂಬ ಮಹತ್ತ್ವದ ದಿನಗಳು. ಸ್ವರಾಜ್ಯ ಲಾಭದ ಜೊತೆಗೇ ದೇಶವಿಭಜನೆ, ಹಿಂದುಗಳ ನರಮೇಧ, ತಮ್ಮ ನಾಡಿನಲ್ಲೆ ನಿರಾಶ್ರಿತರಾದ ಕೋಟ್ಯಂತರ ಬಂಧುಗಳ ಆಕ್ರಂದನ, ಕಾಶ್ಮೀರದಲ್ಲಿ ಪಾಕಿಸ್ತಾನದ ಆಕ್ರಮಣ, ಅದರ ಬೆನ್ನಿನಲ್ಲೇ ಮಹಾತ್ಮಾಗಾಂಧೀಜಿ ಅವರ ಹತ್ಯೆ ಇತ್ಯಾದಿ ಎಲ್ಲ ನಡೆದು, ದೇಶದಲ್ಲಿ ಅಂತರ್ಯುದ್ಧದ ಭಯ ತುಂಬಿತ್ತು. ದೇಶದ ಚುಕ್ಕಾಣಿ ಹಿಡಿದಿದ್ದ ನಾಯಕರು ದೇಶಪ್ರೇಮಿಗಳಾಗಿ ಎಲ್ಲರನ್ನೂ ಜೋಡಿಸುವರೋ ಅಥವಾ ಸ್ಥಾನದ ಮೋಹದಿಂದ ದ್ವೇಷವನ್ನೇ ಬೆಳೆಸುವರೋ ಎಂಬ ಆತಂಕ ತುಂಬಿದ್ದ ಸಂದರ್ಭ ಅದು.

ಆದರೆ ದುರ್ದೈವ. ನಮ್ಮ ರಾಜಕೀಯ ನಾಯಕರು ದೇಶದ ನಾಯಕರಾಗದೆ, ಪಕ್ಷದ ನಾಯಕರಾಗಿ ತಮ್ಮ ಸ್ಥಾನದ ಕುರಿತಾಗಿ ಮಾತ್ರ ಚಿಂತಿಸಿದ್ದು ಈಗ ಇತಿಹಾಸ. ಹಿಂದುಗಳನ್ನು ಸಂಘಟಿಸಿ ಅವರಲ್ಲಿ ಸದ್ಗುಣಗಳನ್ನು ಬೆಳೆಸುತ್ತಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಮಹಾತ್ಮಗಾಂಧೀಜಿಯವರ ಕೊಲೆಯ ನೆವದಲ್ಲಿ ಪ್ರತಿಬಂಧಿಸಿ ಅದನ್ನು ನಾಶಪಡಿಸಲು ಯತ್ನಿಸಿದ ಕೆಟ್ಟ ಯತ್ನ ನಡೆದುಹೋಯಿತು. ಮಹಾತ್ಮಾಜೀ ಅವರ ಹತ್ಯೆಗೂ, ಸಂಘಕ್ಕೂ ಏನೂ ಸಂಬಂಧವಿಲ್ಲವೆಂಬುದು ಪ್ರಧಾನಿ ಪಂಡಿತ್ ನೆಹರು, ಉಪಪ್ರಧಾನಿ ಸರ್ದಾರ್ ಪಟೇಲ್ ಇಬ್ಬರಿಗೂ ತಿಳಿದಿತ್ತು. ೧೯೪೮ರ ಫೆಬ್ರವರಿ ತಿಂಗಳಲ್ಲಿ

ಶ್ರೀ ಪಟೇಲರು ಪಂಡಿತ್ ನೆಹರು ಅವರಿಗೆ ಬರೆದಿರುವ ಆ ಪತ್ರ ಈಗ ಪ್ರಕಟವಾಗಿದೆ. ಅದರಲ್ಲವರು "ಕೊಲೆಗೆ ಸಂಬಂಧಿಸಿದ ಎಲ್ಲ ಪುರಾವೆಗಳೂ ಸಿಕ್ಕಿವೆ. ಸಂಘದ ಪಾತ್ರ ಅದರಲ್ಲಿ ಲೇಶಮಾತ್ರವೂ ಇಲ್ಲ" ಎಂದು ತಿಳಿಸಿದ್ದಾರೆ. ಹೀಗೆ ಸತ್ಯದ ಅರಿವಿದ್ದೂ ಅನ್ಯಾಯವನ್ನೇ ಮುಂದುವರಿಸಿತ್ತು ರಾಜಕೀಯ ನೇತೃತ್ವ.

ಆದರೆ ಸಂಘದ ನೇತೃತ್ವಕ್ಕೆ ದೇಶದ್ದೇ ಚಿಂತೆ. ನಮ್ಮೊಳಗಿನ ಜಗಳ ವಿದೇಶೀಯರಿಗೆ ಒಳನುಗ್ಗಲು ಅವಕಾಶ ನೀಡಬಾರದೆಂಬ ವಾಸ್ತವಿಕ ದೃಷ್ಟಿ. ಸಂಘದ ನಾಯಕರಾದ ಪ. ಪೂ. ಗುರುಜೀಯವರು ತಮ್ಮ ಮೇಲೆ ಮತ್ತು ಸಂಘದ ಮೇಲೆ ಆಗುತ್ತಿರುವ ಅನ್ಯಾಯ, ದಬ್ಬಾಳಿಕೆಗಳನ್ನು ಮೌನವಾಗಿ ಸಹಿಸಿ ದೇಶವನ್ನು ಉಳಿಸಿ ಕಾಪಾಡಿದ್ದು, ಜೊತೆಗೆ ತಮ್ಮನ್ನು ಕಾಪಾಡಿಕೊಂಡ ಧೈರ್ಯ, ವಿವೇಕ, ತಾಳ್ಮೆ, ಎಚ್ಚರಗಳನ್ನು ತೋರಿಸಿದ್ದೂ ಇದೇ ಅವಧಿಯಲ್ಲಿ, ಇದೇ ಪ್ರಸಂಗದಲ್ಲಿ.

ಪ್ರಸ್ತುತ ಪುಸ್ತಕವು ಆ ಸಂದರ್ಭದ ಘಟನೆಯನ್ನು, ಆ ಘಟನೆಗಳ ಹಿಂದಿನ ಚಿಂತನೆಯನ್ನು, ಪ್ರೇರಣೆ ನೀಡಿದ ಭಾವನೆಗಳನ್ನು ಚಿತ್ರಿಸುವ ಕಾವ್ಯ. ಶ್ರೀ ಕೇಶವ ಭಟ್ಟರ ಕಾವ್ಯ ಶೈಲಿಯೂ ನಾಟಕಶೈಲಿಯೂ ಭಾವಕ್ಕೆ ತಕ್ಕಂತೆ ಮೂಡಿ ಬರುವ ಶಬ್ದಸಂಪತ್ತಿನಿಂದ ತುಂಬಿ ಮನೋಜ್ಞವಾಗಿದೆ. ಜೊತೆಗೆ ಸ್ವಾತಂತ್ರ್ಯದ ಮೂಲಭಾವವಾದ "ಸ್ವ"ತ್ವವು ನಮ್ಮ ಯೋಚನೆ, ನಮ್ಮ ಮಾತು ಮತ್ತು ನಮ್ಮ ಕೃತಿಗಳಲ್ಲಿ ಹೇಗೆ ಮೂಡಿಬರಬೇಕೆಂಬುದನ್ನು ಸೂಕ್ಷ್ಮವಾಗಿ ಸೂಚಿಸುವ ಧ್ವನಿಯಿಂದ ಕೂಡಿದೆ. ಈ ಸಮಾಜವನ್ನು ಸಂಘಟಿಸಲು ಯತ್ನಿಸುವವರು ಯಾವ ದಾರಿಯನ್ನವಲಂಬಿಸಬೇಕು ಹಾಗೂ ಯಾವ ಎಚ್ಚರಿಕೆಗಳನ್ನು ಗಮನದಲ್ಲಿಡಬೇಕೆಂಬುದನ್ನು ಬಿಂಬಿಸುತ್ತಿದೆ.

ಈ ಕೃತಿ ಸಾಹಿತ್ಯಪ್ರಿಯರಿಗೂ, ಸಮಾಜಪ್ರೇಮಿಗಳಿಗೂ ಸಹಜವಾಗಿ ಒಪ್ಪಿತವಾಗುತ್ತದೆಂಬ ಭರವಸೆ ನನ್ನದು. ಈ ಕೃತಿಯನ್ನು ತಡವಾಗಿಯಾದರೂ ಪ್ರಕಟಿಸುತ್ತಿರುವ ಶ್ರೀ ಕೇಶವ ಭಟ್ಟರನ್ನು ಮನಸಾರೆ ಅಭಿನಂದಿಸುವೆ. ಅವರ ಕೃತಿಗೆ ಜನಮನ್ನಣೆ ಸಿಗಲೆಂದು ಹಾರೈಸುವೆ.

'ಕೇಶವಕೃಪಾ'
ಶಂಕರಪುರಂ, ಬೆಂಗಳೂರು-4
10-6-1996

ನ. ಕೃಷ್ಣಪ್ಪ

ಶುಭಾಶಯ

ರಾಷ್ಟ್ರಭಕ್ತಿಮಾನಸ ಗ್ರಂಥವಿದು ಚಿಕ್ಕದು, ಇದರ ಪ್ರಯೋಜನ ಬಲುದೊಡ್ಡದು, ಇಂದು ದಿನದಿನ ಅಗಣಿತ ಪುಸ್ತಕಗಳು ಹೊರಬರುತ್ತಿವೆ; ಅವುಗಳಲ್ಲಿ ರಾಷ್ಟ್ರದ ಕಲ್ಪನೆ, ಅಭಿಮಾನ, ನಿಷ್ಠೆ ಮೂಡಿಸಬಲ್ಲ ವಿಚಾರಪ್ರದ ಪುಸ್ತಕಗಳು ತೀರಾ ವಿರಳ. ಶೀಲವೃದ್ಧಿ ಪಡಿಸತಕ್ಕವು ಇಲ್ಲವೆನ್ನಬಹುದು, ಈ ದಿಶೆಯಲ್ಲಿ ನನ್ನ ತಮ್ಮನು ಬರೆದು ಈಗ ಪ್ರಕಟಿಸುವ ರಾಷ್ಟ್ರಭಕ್ತಿಮಾನಸವು ಒಂದು ವಿಶೇಷದ ಮತ್ತು ಪ್ರತಿಯೋರ್ವ ಭಾರತೀಯನೂ ಸ್ವೀಕರಿಸಲು ಪ್ರೇರಿಸುವ ವಿಶೇಷತೆಯದಾಗಿದೆ,

ಇದರಲ್ಲಿ 'ಸಂಘಶಕ್ತಿ' ಭಾಗದಲ್ಲಿ ರಾಷ್ಟ್ರಕ್ಕಾಗಿ ಮಾಡಬೇಕಾಗ ತ್ಯಾಗ ಬಲಿದಾನಗಳಿಗೆ ಸೂಕ್ತ ಪ್ರೇರಣೆಯಿದೆ. ಸಂಘದ ಸ್ವಯಂಸೇವಕರು ರಾಷ್ಟ್ರ ಪ್ರೇಮದಿಂದ ಮಾಡುತ್ತ ಬಂದ ಸಾಹಸ ಕಾರ್ಯಗಳು ಅವೆಷ್ಟೋ ಇವೆ. ಆದರೆ ನನ್ನ ತಮ್ಮನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹುಟ್ಟು, ಬೆಳವಣಿಗೆ ಮತ್ತು ಅಂದಿನ ನಮ್ಮ ಸರಕಾರವು ಮಿಥ್ಯಾರೋಪಣೆಯಿಂದ ಅದನ್ನು ನಿಷೇಧಿಸಿ, ಅನ್ಯಾಯ ಅತ್ಯಾಚಾರ ಮಾಡಿದುದನ್ನು ವಿವಿಧ ಲಯಗತಿಯ ಧಾಟಿಗಳಲ್ಲಿ ತಿಳಿಸುತ್ತ, ಸತ್ಯಕ್ಕೆ ಜಯವಿದೆ ಎಂಬುದನ್ನು ತೋರಿಸಿಕೊಟ್ಟ ಪಾಡನ್ನು ಇದರಲ್ಲಿ ವಿವರಿಸಿದ್ದಾನೆ. ಈ ಗೀತಭಾಗವು ರಾಷ್ಟ್ರೀಯ ಸ್ಫೂರ್ತಿ ದಾಯಕವಾಗಿ ರೋಮಾಂಚನಕಾರಿಯಾಗಿದೆ.

ಎರಡನೆಯದು 'ರಾಮರಾಜ್ಯ'. ಇದು ಸಂಘಶಾಖಾಶಿಕ್ಷಣದ ಹಾಗೂ ಬೌದ್ಧಿಕದ ಚಿತ್ರಣವನ್ನು ನೀಡುವ ಸಂಘಟನಾವಿಧಾನದಿಂದ ಕೂಡಿದೆ. ಕೊನೆಯದು ಯಕ್ಷಗಾನ ಪ್ರಸಂಗ. ಪ್ರಚಲಿತವಿರುವ ಯಕ್ಷಗಾನ ಕೃತಿಗಳು ಪುರಾಣಾಂತರ್ಗತಗಳು; ಆದರೆ ಈಗೀಗ ಕೆಲವು ಕಟ್ಟುಕತೆಯವೂ ಇವೆ. ಆದರೆ, ಇವು ರಾಷ್ಟ್ರನಿಷ್ಠೆ ಮೂಡಿಸುವವುಗಳಲ್ಲ. ಆದುದರಿಂದ ಇತಿಹಾಸವಸ್ತು ವೊಂದನ್ನು ಇಲ್ಲಿ ಆಯ್ಕೆಮಾಡಲಾಗಿದೆ. ಇದು ಕೇವಲ ಒಂದು ಗಂಟೆಯ ಕಾರ್ಯಕ್ರಮಕ್ಕೆ ಸರಿಯಾಗುವಂತಿದೆ.

ನಮ್ಮದು ತಾಳ್ತಜೆ ಮನೆ; ರಾಷ್ಟ್ರಭಕ್ತಿಗೆ ಹೆಸರಾದುದು. ನಮ್ಮ ತಂದೆಯವರಾದ ದಿ. ಗೋವಿಂದ ಭಟ್ಟರು ಸ್ವರಾಜ್ಯಪ್ರಾಪ್ತಿಗೆ ಎಷ್ಟೋ ವರ್ಷಗಳ ಹಿಂದಿನಿಂದಲೇ ನಮ್ಮ ಗ್ರಾಮದಲ್ಲಿ ವಾರಕ್ಕೊಮ್ಮೆ ನಡೆಯುತ್ತಿದ್ದ ಸ್ವರಾಜ್ಯವೈಚಾರಿಕ ಸಭೆಗಳಲ್ಲಿ ಭಾಗವಹಿಸುತ್ತಿದ್ದಾಗ, ಅವರ ಮಕ್ಕಳಾದ ನಾವೂ ಅಲ್ಲಿರುತ್ತಿದ್ದೆವು. ಆ ಸಭೆಗಳಲ್ಲಿ ಅಖಂಡಭಾರತದ ಸ್ವರಾಜ್ಯ, ಗೋವಧನಿಷೇಧ, ಮದ್ಯನಿಷೇಧ, ಉಪ್ಪಿನ ಸತ್ಯಾಗ್ರಹ, ಪ್ರತಿಯೊಬ್ಬನೂ ನೂಲುವುದು ಮತ್ತು ಪರದೇಶಿವಸ್ತ್ರಬಹಿಷ್ಕಾರ ಮಾಡುವ ವಿಚಾರಗಳು, ವಂದೇ ಮಾತರಂ ಎಂಬ ರಾಷ್ಟ್ರಗೀತೆ—ಇವು ಮುಖ್ಯವಾಗಿದ್ದುವು. ನಮ್ಮಲ್ಲಿ ಹಲವರು ಮತ್ತು ನಾವು ಮನೆಯಲ್ಲಿ ತಕ್ಕಲಿ-ಚರಕಗಳಲ್ಲಿ ನೂಲೆಳೆಯುತ್ತಿದ್ದೆವು. ಇವೆಲ್ಲ ಕಾರ್ಯಕ್ರಮಗಳು ನಮ್ಮಲ್ಲಿ ರಾಷ್ಟ್ರಭಕ್ತಿಯನ್ನು ಮೂಡಿಸಿದ್ದುವು. ಸುಮಾರು 1942 ರಲ್ಲಿ ನಮ್ಮ ಗ್ರಾಮದಲ್ಲಿ ಮೊದಲನೆಯದಾಗಿ, ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ವಠಾರದಲ್ಲಿ ಸಂಘಶಾಖೆ ಪ್ರಾರಂಭವಾದಾಗ ನಾವಿಬ್ಬರೂ ಆಗ ಸಂಘದ ಸ್ವಯಂಸೇವಕರಾದೆವು. ಪುತ್ತೂರು ಮಂಗಳೂರುಗಳಲ್ಲಿ ಆಗುತ್ತಿದ್ದ ಬೈಠಕು ಉತ್ಸವಾದಿಗಳಲ್ಲಿ ಭಾಗವಹಿಸುತ್ತಿದ್ದೆವು. ಹೀಗೆ ಸಂಘದ ಮೂಲಕವೂ ನಮ್ಮಲ್ಲಿ ರಾಷ್ಟ್ರಭಕ್ತಿ ಮಡುಗಟ್ಟಿದುದು ಸಹಜ. ನನ್ನ ತಮ್ಮನು ಸಂಘಕಾರ್ಯದಲ್ಲಿ ಇನ್ನಷ್ಟು ಹೆಚ್ಚಾಗಿ ತೊಡಗಿಸಿಕೊಂಡು, ಸಂಘ ನಿಷೇಧದ ತೆರವಿಗಾಗಿ ಚಳವಳಿಮಾಡಿಯೂ ಪಡೆದ ಅನುಭವದಿಂದ ಈ ಕೃತಿಗೆ ಹೆಚ್ಚಿನ ಕಳೆಬಂದಿದೆ. ಇವನಿಗೆ ಒಳ್ಳೆಯ ಕವಿತಾಶಕ್ತಿಯೂ ಕಾವ್ಯಶಾಸ್ತ್ರ ಜ್ಞಾನವೂ ಗದ್ಯಪದ್ಯರಚನಾ ನೈಪುಣ್ಯವೂ ಇರುವುದರಿಂದ ಇದೊಂದು ಉತ್ಕೃಷ್ಟ ರಚನೆಯಾಗಿದೆ. ಇಂದಿನ ಯುವಪೀಳಿಗೆಯವರನ್ನು ಶೀಲವಂತರೂ ರಾಷ್ಟ್ರಾಭಿಮಾನಿಗಳೂ ಆಗುವಂತೆ ಮಾಡತಕ್ಕ ಕೃತಿಯಿದು, ಇದನ್ನು ಎಲ್ಲರೂ ಓದಿ ಮನನಮಾಡಿರಿ. ರಾಷ್ಟ್ರದ ಏಳಿಗೆಗೆ ಕಾರ್ಯತತ್ಪರರಾಗಿರಿ, ಗ್ರಂಥ ಕರ್ತನಿಗೂ ವಾಚಕರಿಗೂ ಶುಭವಾಗಲಿ.

'ಬೋಧಾಯನ' ಪಂಜಳ
ಉಪ್ಪಿನಂಗಡಿ-574241, ದ. ಕ

ತಾಳ್ತಜೆ ಕೃಷ್ಣ ಭಟ್ಟ, ವಿದ್ವಾನ್
18-8-1996

ಪ್ರಸ್ತಾವನೆ

ಸಂಘಶಕ್ತಿ : ಭಾರತೀಯ ಸಂಸ್ಕೃತಿ ಪ್ರಾಜ್ಞರಿಗೆ ಮತ್ತು ರಾಷ್ಟ್ರಭಕ್ತಿ ಸಂಪನ್ನರಿಗೆ 'ಸಂಘಶಕ್ತಿ' ಎಂದಾಗ, ಸ್ಫೂರ್ತಿಯ ಹಾಗೂ ವೀರರಸದ ಸೆಲೆ ಉಗಮವಾಗಬಹುದು. ಆದರೆ, ಸಘಂದ್ವೇಷದ ಕೊಳೆ ತುಂಬಿದ ಎದೆಯವರಿಗೆ ಮತ್ತು ರಾಷ್ಟ್ರವಿರೋಧಿ ಶಕ್ತಿಗಳಿಗೆ ದ್ವೇಷದ ಮತ್ತು ಭಯದ ಪುಳಕವುಂಟಾಗ ಬಹುದು. ವಾಸ್ತವಿಕವಾಗಿ ಸಂಘಶಕ್ತಿ, ಆಸುರೀಶಕ್ತಿಯಲ್ಲ, ಅದು ದೈವಿಕ ಶಕ್ತಿ; ವಿವೇಕಬುದ್ಧಿಯ ರಾಷ್ಟ್ರಹಿತದ ಕರ್ತವ್ಯನಿಷ್ಠ ಶಕ್ತಿ. ಅದು ಧರ್ಮರಕ್ಷಣೆ, ಅಧರ್ಮನಿರ್ಮೂಲನ, ಸರ್ವಸಮಾನತೆ, ನೀತಿಯುಕ್ತ ಅನುಶಾಸನ ಹಾಗೂ ಮಾನವೀಯಮೌಲ್ಯಜನಕ. ವಸುಧೈಕಕುಟುಂಬ ಪ್ರಜ್ಞೆಯುಳ್ಳದು, ಅಂತಹ ಶಕ್ತಿಸಂವರ್ಧನೆಯಿಂದಲೇ ರಾಷ್ಟ್ರಾಭ್ಯುದಯವಾಗುವುದು. **'ಸಂಘೇ ಶಕ್ತಿಃ ಕಲೌ ಯುಗೇ'**. ಅಂತಹ ಶಕ್ತಿಯಾಗಿ ಹಿಂದೂರಾಷ್ಟ್ರದ ಉಜ್ವಲ ಆಶಾಕಿರಣ ವಾಗಿ, ೧೯೨೫, ವಿಜಯದಶಮಿಯಂದು ಡಾ॥ ಹೆಡಗೇವಾರರಿಂದ ಸ್ಥಾಪಿತ ವಾಗಿ ಪ್ರಚಲಿತವಾದುದು — ರಾಷ್ಟ್ರೀಯ ಸ್ವಯಂಸೇವಕ ಸಂಘ, ಅದರ ಸೈದ್ಧಾಂತಿಕ ಮತ್ತು ನೈತಿಕ ದರ್ಶನ ಕೃತಿಯಿದು.

ಭಾರತದ ಪರದಾಸ್ಯವನ್ನು ಕಿತ್ತೊಗೆದು ಪ್ರಜಾಪ್ರಭುತ್ವದ ರಾಮರಾಜ್ಯ ವನ್ನು ನೆಲೆಗೊಳಿಸುವ ಉದ್ದೇಶದಿಂದ ಮಹಾತ್ಮಾ ಗಾಂಧಿಯವರ ಮುಂದಾ ಳ್ತನದಲ್ಲಿ ಆದ ಸತ್ಯಾಗ್ರಹ ಸಮರಗಳಲ್ಲಿ ಭಾರತೀಯ ಸಂಘಶಕ್ತಿ ಪ್ರಚುರ ವಾಗಿದೆ. ಆಗ ಅದನ್ನು 'ಸಂಘ' ಎಂದು ಹೆಸರಿಸದೆ, ವಿದೇಶೀಭಾಷೆಯಲ್ಲಿ 'ಕಾಂಗ್ರೆಸ್' ಎನ್ನಲಾಗಿದ್ದಿತು. ಆದರಿಂದಾಗಿ ನಮಗೆ ಭಾಗಶಃ ಸ್ವರಾಜ್ಯ ದೊರಕಿದೆ. ಆ ಚಳವಳಿಯ ಅಂದಿನ ಉದ್ದೇಶ ಸ್ವರಾಜ್ಯಕ್ಕಷ್ಟೇ ಪರಿಮಿತ ವಾಗಿರದೆ, ಅಖಂಡಭಾರತದ ಸುಸಂಸ್ಕೃತದ ಸ್ವರಾಜ್ಯವಾಗಿತ್ತು. ಗೋವಧ ನಿಷೇಧ ಮದ್ಯನಿಷೇಧಗಳು ಪ್ರಮುಖವಾಗಿ, ಧೂಮಪಾನನಿಷೇಧದ ವರೆಗೂ ಚಾಚಿದ್ದಿತು. ಸರಳಜೀವನ ಪ್ರಬುದ್ಧವೈಚಾರಿಕತೆಗಳ ಲಕ್ಷ್ಯವಿದ್ದಿತು. ಆ ಉದ್ದೇಶಗಳು ಇನ್ನೂ ಈಡೇರಿಲ್ಲವಲ್ಲದೆ ಈಡೇರಿಸುವ ಹಾದಿಯಲ್ಲಿಯೂ ನಮ್ಮ ಈಗಿನ ಆಡಳಿತದ ಧೋರಣೆ ಇಲ್ಲದಿರುವುದು ಬುದ್ಧಿಶಾಲಿ ಜನರಿಗೆ ಗೋಚರಿಸುವ ಸಂಗತಿ.

ಇಂತಹ ಭವ್ಯೋದ್ದೇಶದಿಂದ ಕೂಡಿದ ಸಾಂಸ್ಕೃತಿಕ ತಳಪಾಯದ ರಾ. ಸ್ವ. ಸಂಘಕ್ಕೆ ಒಂದು ಸತ್ವಪರೀಕ್ಷೆಯ ಕಾಲ ಬಂದಿತು. ಸಂಘದ ಅಭಿವೃದ್ಧಿಯನ್ನು ಸಹಿಸದ ಅಧಿಕಾರಮತ್ತರ ನಿಷ್ಕಾರಣ ದ್ವೇಷದಿಂದ ಮತ್ತು ಆ ದ್ವೇಷಸಾಧನೆಗೆ ಅನುಕೂಲ ಪರಿಸ್ಥಿತಿಯಾಗಿ ೩೦-೧-೧೯೪೮ ರಂದು ಆದ ಗಾಂಧಿಹತ್ಯೆಯ ಮಿಥ್ಯಾರೋಪಣೆಯಿಂದ, ಅಂದು ನಮ್ಮ ಸರಕಾರ ಅಪ್ಪಟ ಸುಳ್ಳಿನ ಬೆಂಬಲಪಡೆದು ೪-೨-೧೯೪೮ ರಿಂದ ಸಂಘವನ್ನು ಕಾನೂನು ಬಾಹಿರ ವೆಂದು ಸಾರಿಬಿಟ್ಟಿತು. ಅಷ್ಟೇ ಅಲ್ಲ, ಪ್ರತಿಬಂಧದ ಛಲದಲ್ಲಿ ಸಂಘದವರ ಬಾಯ್ಮುಚ್ಚಿಸಿ, ನಾನಾ ಅಪಪ್ರಚಾರವನ್ನೂ ಮಾಡಲಾಯಿತು. ಸಂಘದ ಸ್ವಯಂಸೇವಕರನ್ನು ಚಿತ್ರಹಿಂಸೆಗೆ ಗುರಿಪಡಿಸಲಾಯಿತು. ಸೆರೆಮನೆಗಳಿಗೆ ತಳ್ಳಲಾಯಿತು. ಆದರೇನು ? ಸತ್ಯಕ್ಕೆ ಜಯವಿದೆ. ನ್ಯಾಯದೇವತೆಯ ಮುಂದೆ ಸಂಘವು ನಿಷ್ಕಳಂಕವೆಂದು ರುಜುವಾಯಿತು. ಆದರೂ ಮೊದಲು ಹೇರಲಾದ ಪ್ರತಿಬಂಧಕಾಜ್ಞೆಯನ್ನು ತೆರವುಮಾಡಲು ಆಗಿನ ಸರಕಾರದ ಮುಂದೆ ಸಾವೋಪಾಯವೇನೂ ಫಲಿಸದುದರಿಂದ ಸತ್ಯಾಗ್ರಹದ ಮೂಲಕ ಸಂಘಶಕ್ತಿಯನ್ನು ಪ್ರದರ್ಶಿಸಬೇಕಾಯಿತು. ಅದರ ವಿವರವನ್ನು ಈ ಕಥನ ಗೀತದಲ್ಲಿ ಚಿತ್ರಿಸಲಾಗಿದೆ.

ಸಂಘವು ಅಸುರೀಭಾವವುಳ್ಳದಾಗಿದ್ದರೆ ಅದರ ಮೇಲೆ ಸುಳ್ಳುಹೊರಿಸಿ ಪ್ರತಿಬಂಧವನ್ನು ಸಾರಿದಾಗಲೇ ತದ್ವಿರುದ್ಧವಾಗಿ ದೇಶಾದ್ಯಂತ ಹೋರಾಟ ವಾಗಿ ರಕ್ತದ ಕಾಲುವೆಯೇ ಹರಿಯುತ್ತಿತ್ತು. ಆದರೆ, ಹಾಗಾಗಲಿಲ್ಲ. ಸಂಘ ಸಹನೆಗೆಡಲಿಲ್ಲ. ಏಕೆ ? **'ಕ್ಷಮಾ ಶಕ್ತಾ'** ಎಂಬಂತೆ, ಸಹನೆಯು ಶಕ್ತಿಯ ಒಂದು ಲಕ್ಷಣ. ಅದರೊಂದಿಗೆ 'ಸತ್ಯಕ್ಕೆ ಜಯವಿದೆ' ಎಂಬ ನಂಬುಗೆಯೂ ಸಂಘದ ಶೀಲ. ಸಂಘವು (1-12-1948 — 21-1-1949) ಅಹಿಂಸಾ ತ್ಮಕವಾಗಿ ಶಿಸ್ತಿನಿಂದ ನಡೆಸಿದ ಸತ್ಯಾಗ್ರಹದಲ್ಲಿ 80 ಸಾವಿರಕ್ಕೂ ಮಿಕ್ಕಿದ ಸ್ವಯಂಸೇವಕರು ಸೆರೆಮನೆ ಸೇರಿದ್ದರು. ಇದರಿಂದ ಸಂಘದ ನಿರ್ದೋಷತೆಯೂ ದೇಶದ ಏಳಿಗೆಗೆ ಅದರ ಆವಶ್ಯಕತೆಯೂ ಸ್ಥಾಪಿತವಾದವು. ಮಿಥ್ಯಾರೋಪಣೆ ಯಿಂದ ಅನ್ಯಾಯವಾಗಿ ಹೇರಲಾಗಿದ್ದ ಪ್ರತಿಬಂಧದ ಅಂಧಕಾರ ೧೧-೭-೧೯೪೯ ರಂದು ಸತ್ಯಸೂರ್ಯನ ಮುಂದಣ ಕತ್ತಲೆಯಂತೆ ತೊಲಗಿತು.

ವಿಶ್ವದಲ್ಲಿ ಸಂಪೂರ್ಣ ಅಹಿಂಸಾತ್ಮಕವಾಗಿ ಇಷ್ಟೊಂದು ಸಂಖ್ಯೆಯಲ್ಲಿ ಏಕಕಾಲದಲ್ಲಿ ಶಿಸ್ತಿನಿಂದ ಸತ್ಯಾಗ್ರಹ ಮಾಡಿ ಜಯಗಳಿಸಿದ ನಿಷ್ಕಳಂಕ ಯಶಸ್ಸಿನ ಏಕೈಕ ಸಂಸ್ಥೆ ರಾಷ್ಟ್ರೀಯ ಸ್ವಯಂಸೇವಕ ಸಂಘ. ಆಗ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕಿನ ಪೆರ್ಲ ಸತ್ಯನಾರಾಯಣ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿದ್ದು ಸಂಘದ ಸ್ವಯಂಸೇವಕನಾಗಿದ್ದ ಈ ಲೇಖಕನು ಸಂಘಕ್ಕೆ ಪ್ರತಿಬಂಧವಾದಾಗ ಆ ಈ ಮತ್ಸರಿವ್ಯಕ್ತಿಗಳಿಂದ ಕೇಳಿದ ಅಪಮಾನಕರ ನಿಂದನೆ, ಉಚ್ಚಾರಣೆ ಸ್ವಲ್ಪವೇ ! ಮುಂದೆ ಸತ್ಯಾಗ್ರಹಕ್ಕಾಗಿ ಭಾರತಮಾತೆಯ ಕರೆ ಬಂದಾಗ ಅದಕ್ಕೆ ಓಗೊಟ್ಟು ತನ್ನ ಉದ್ಯೋಗಕ್ಕೆ ರಜೆ ಹಾಕಿ—ಸಂಘದ ಮೇಲಿನ ಪ್ರತಿಬಂಧ ತೊಲಗುವ ತನಕ ರಜೆಕೊಡುವಂತೆ ಕೇಳಿಕೊಂಡು, ಸತ್ಯಾಗ್ರಹಿಯಾಗಿ ನಾಲ್ಕು ತಿಂಗಳು ಕಣ್ಣಾನೂರು ಜೈಲಿನಲ್ಲಿ ದ್ದುದು ರಾಷ್ಟ್ರಭಕ್ತರಿಗೆ ಅಭಿಮಾನದ ಸಂಗತಿ. ಅನಂತರ, ಪುನಃ ಸಂಘ ಪ್ರಾರಂಭಗೊಂಡಾಗ, ಒಂದು ವರ್ಷ ಕಾಲ ಸಂಘದ ಪ್ರಚಾರಕನಾಗಿಯೂ ರಾಷ್ಟ್ರಸೇವೆ ಸಲ್ಲಿಸಿರುವುದು ಮರೆಯದ ಸಂಗತಿ. ಈ ಸ್ವಾನುಭವಗಳಿಂದ ಅಂದೇ ರಚಿಸಲಾದ ಗೇಯಕೃತಿಯಿದು.

ಭಾರತದ ರಾಜಕೀಯ ಇತಿಹಾಸದಲ್ಲಿ—ಮುಂದೆ ಪ್ರಧಾನಿ ಇಂದಿರಾ ಗಾಂಧಿಯವರು 1975, ಜೂನ್ 26 ರಂದು ಅನುಚಿತವಾಗಿ ಜಾರಿಮಾಡಿದ ತುರ್ತುಪರಿಸ್ಥಿತಿಯಲ್ಲಿ ಸಂಘಕ್ಕೆ ಪುನಃ ಅನುಚಿತವಾಗಿ ಪ್ರತಿಬಂಧವನ್ನು ಹೇರಿ ನಿರಪರಾಧಿಗಳನ್ನು ಬಂಧಿಸಿ ಚಿತ್ರಹಿಂಸೆಕೊಡಿಸಿದುದು, ಸೆರೆಮನೆಗೆ ಸೇರಿಸಿದುದು ಉಂಟು. ಈ ಸಂದರ್ಭದಲ್ಲಿ ಇದೇ ಲೇಖಕನ ಹಿರಿಯ ಮಗ ರಘುಪತಿಯೂ ಬಂಧಿತನಾದುದಲ್ಲದೆ, ವಿಮಾನವೇರಿಸುವ ಪೋಲೀಸು ಶಿಕ್ಷೆಗೂ ಅಕಾರಣವಾಗಿ ಗುರಿಯಾದುದುಂಟು. ಆದರೆ ಅಂದು ಕೆಲವು ರಾಜಕೀಯ ಧುರೀಣರಿಗೂ ಸೆರೆ ಮನೆಯೂಗಿದೆ. ಪರಿಣಾಮವಾಗಿ, ಇಂದಿರಾಗಾಂಧಿಯವರು ತಮ್ಮ ಪಕ್ಷಸಹಿತ ಸಂಪೂರ್ಣ ಪರಾಭವಗೊಂಡುದಲ್ಲದೆ, ಮುಂದೆ ಒಂದು ಸಾವಿರ ವರ್ಷಗಳ ವರೆಗೂ ತುರ್ತುಪರಿಸ್ಥಿತಿ ತರುವುದಿಲ್ಲವೆಂದು ಪ್ರಕಟಿಸಿ, ಕ್ಷಮಾಯಾಚನೆ ಘೋಷಿಸಿದ್ದರು. ಆಮೇಲೆ, ಅಯೋಧ್ಯೆಯ ರಾಮಜನ್ಮಭೂಮಿಗೆ ಮತ್ತು ರಾಷ್ಟ್ರಪುರುಷ ಶ್ರೀರಾಮನಿಗೆ, ತನ್ಮೂಲಕ ರಾಷ್ಟ್ರಕ್ಕೆ ಐತಿಹಾಸಿಕ ಕಳಂಕಪ್ರಾಯ

ವಾಗಿದ್ದ ಬಾಬರಿ ಕಟ್ಟಡವನ್ನು 1992 ರಲ್ಲಿ ನಮ್ಮ ರಾಷ್ಟ್ರಭಕ್ತರು ನೆಲಸಮ ಮಾಡಿದಾಗ ಸಂಘಕ್ಕೆ ಮತ್ತೊಮ್ಮೆ ನಿಷೇಧ ಹೇರಲಾಗಿತ್ತು. ಆ ನಿಷೇಧವೇ ನ್ಯಾಯಬಾಹಿರವಾಗಿದ್ದುದರಿಂದ ಅದರ ತೆರವಿಗಾಗಿ ಹಿಂದಿನಂತೆ ವ್ಯಾಪಕ ಸತ್ಯಾಗ್ರಹ ಅವಶ್ಯವಾಗಲಿಲ್ಲ. ಆದುದರಿಂದ ಈ ಕಥನಗೀತದಲ್ಲಿ ಬಣ್ಣಿಸಲಾದ ಸತ್ಯಾಗ್ರಹ ಹೆಚ್ಚು ಮಹತ್ವವುಳ್ಳದೆಂದು ತಿಳಿಯಬಹುದು.

ಇದೇ ಕಥನಗೀತದ ಕರುಣಪರ್ವದಲ್ಲಿ ಸಹಜೋಕ್ತಿಯಿಂದ ವಿವರಿಸಿದಂತೆ, ಸಂಘದವರ ಮೇಲಾದ ಅನ್ಯಾಯ ಅತ್ಯಾಚಾರ ಹಿಂಸೆಗಳು ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಾಗಿದ್ದವು. ಆದರೆ, ಈ ಕೃತಿರಚನೆಯ ವೇಳೆ ಶ್ರೀ ಗುರೂಜೀ ಯವರ ಹಿತೋಕ್ತಿಗಳು ಕವಿಗೆ ಅಡ್ಡಬಂದವು – "ಕಳೆದ ವಿಷಮಘಟನೆಗಳನ್ನು ಮರೆಯೋಣ. ಆ ಕಾಲದಲ್ಲಿ ನಮ್ಮ ಸಂಘಕಾರ್ಯಕ್ಕೆ ಬಾಧೆಬಂದಿದ್ದರೆ, ಅದು ನಮ್ಮ ಸಹೋದರರಿಂದಲೇ ಆಗಿದೆ. ನಾಲಗೆಯನ್ನು ಒಮ್ಮೆ ಹಲ್ಲುಕಚ್ಚಿತೆಂದು ಹಲ್ಲನ್ನು ಉದುರಿಸುವುದಿಲ್ಲವಷ್ಟೆ"? ಈ ಹಿತೋಕ್ತಿಗನುಸಾರವಾಗಿ ಅದರ ವಿವರ ವಿಸ್ತಾರವನ್ನು ಮೊಟಕುಮಾಡಲಾಗಿದೆ. ಸಹೃದಯರ ದಿಗ್ದರ್ಶನಕ್ಕೆ ತಕ್ಕಷ್ಟು ಮಾತ್ರ ಕೊಡಲಾಗಿದೆ.

ರಾಮರಾಜ್ಯ : ಇದೊಂದು ಸಂವಾದಾತ್ಮಕ ರಚನೆ, ಕಥಾವಸ್ತು ಕಾಲ್ಪನಿಕ, ಭಾರತೀಯರ ಆದರ್ಶ ರಾಜ್ಯವ್ಯವಸ್ಥೆಯೇ ರಾಮರಾಜ್ಯ. ಅದು ಸುಖ ಶಾಂತಿ ಸಮೃದ್ಧಿಗಳ, ಸರ್ವಸಮಾನತೆಯ ನೆಲೆವೀಡು. ಕಳವು, ಕೊಲೆ, ದ್ವೇಷ, ಸುಳ್ಳು, ಮೋಸಗಳಾಗಲಿ ಅನಾಚಾರಗಳಾಗಲಿ ಇಲ್ಲದ ನೆಮ್ಮದಿಯ ಜನಜೀವನವಿರುವಂತಹದು. ಧರ್ಮ ಸಂಸ್ಕೃತಿಗಳ ಆಧಾರದ ನೀತಿಯೇ ರಾಮರಾಜ್ಯದಲ್ಲಿ ಎಲ್ಲರ ರಕ್ಷಕ. ಆದುದರಿಂದ ಯಾವ ಮುಖ್ಯ ಉನ್ನತವ್ಯಕ್ತಿಗೂ ಈಗಿನಂತೆ ಕೋಟಿ ಕೋಟಿ ಹಣ ವೆಚ್ಚದ ರಕ್ಷಣೆ ಬೇಕಾಗಿಲ್ಲ. ನಮ್ಮ ದೇಶದ ಸ್ವರಾಜ್ಯಕ್ಕಾಗಿ ಶ್ರಮಿಸುತ್ತಿದ್ದ ರಾಷ್ಟ್ರವೀರರಿಗೆ ಅಂದು ರಾಮರಾಜ್ಯವೇ ಧ್ಯೇಯವಾಗಿದ್ದಿತು. ಅದು ಈಗ ಹೇಗೆ ಸಾಧ್ಯವೆಂಬುದರ ಮಾರ್ಗದರ್ಶಿ ಈ ರೂಪಕ ಕಥಾವಸ್ತು ಹೀಗೆ—

ಭಾರತದೇಶದಲ್ಲಿ ಮಹಾ ಸ್ವಾರ್ಥಿಯಾಗಿ ಶಾಂತರಾಜನು ರಾಜ್ಯವಾಳು ತ್ತಿದ್ದನು. ಅವನ ಮಂತ್ರಿಗಳು ಅಧಿಕಾರ ದಾಹವುಳ್ಳವರಾಗಿದ್ದು, ರಾಜನ

ಎಲ್ಲ ನೀತಿಗಳಿಗೂ ಸೈಗುಟ್ಟುತ್ತ ಬೌದ್ಧಿಕ ದಾಸರಾಗಿದ್ದರು. ಇದರಿಂದ ಜನರಲ್ಲಿ ಧರ್ಮ-ಸಂಸ್ಕೃತಿಗಳು ಲುಪ್ತವಾಗುತ್ತಬಂದವು. ರಾಜನ ವಿರುದ್ಧ ಯಾರೂ ಮಾತೆತ್ತುತ್ತಿರಲಿಲ್ಲ. ಮಾತೆತ್ತಿದವರು ಸೆರೆಗೆ ಗುರಿಯಾಗುತ್ತಿದ್ದರು. ಇವನ ರಾಜನೀತಿಯ ಪ್ರಕಾರ—ಶತ್ರುಗಳಲ್ಲಿ ಅತ್ಯಂತ ಮೃದುಭಾವ, ರಾಷ್ಟ್ರಭಕ್ತರ ಮೇಲೆ ಅತಿಕಠಿನವರ್ತನೆ ! ಶತ್ರುಗಳ ತುಷ್ಟೀಕರಣವೇ ಇವನ ರಾಜನೀತಿ. ಘಾತಕಿಗಳಲ್ಲಿ, ಪಾತಕಿಗಳಲ್ಲಿ ನಯವಾದ ವರ್ತನೆ, ಒಪ್ಪಂದ, ಸಂಧಾನ, ಸಹನೆ, ಶಾಂತತೆ, ಸಮಾಧಾನ. ತನ್ನ ವಿಶ್ವಶಾಂತಿ ತತ್ತ್ವವೇ ರಾಷ್ಟ್ರರಕ್ಷಣೆ ಮಾಡುವುದೆಂದು ಅವನ ಭ್ರಮೆ. ಆದುದರಿಂದ ತನ್ನ ಸೈನ್ಯಗಳನ್ನೆಲ್ಲ ನಿಷ್ಪ್ರಯೋಜನವೆಂದು ವಿಸರ್ಜಿಸಿದನು. ಇಂತಹ ಪರಿಸ್ಥಿತಿಯಲ್ಲಿಯೂ ರಾಷ್ಟ್ರಭಕ್ತರಾದ ವಿಚಾರಶೀಲ ಪ್ರಜೆಗಳು ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಪ್ರೇಮ ಅನುಶಾಸನಗಳಿಂದ ಧೈರ್ಯ ಶೌರ್ಯಗಳಿಂದ 'ನಾಡಕೂಟ' ಎಂಬ ಹೆಸರಿನಿಂದ ಪ್ರಸಿದ್ಧಿಯಿಲ್ಲದೆಯೇ ಸಂಘಟನೆ ಮಾಡುತ್ತಿದ್ದರು.

ಈ ರಾಜನ ದೌರ್ಬಲ್ಯವನ್ನರಿತು ಸಮಯ ಕಾದು, ನೆರೆಯ ದೇಶದ ದುರ್ಮೇಧನೆಂಬ ಕ್ರೂರ ವಿಧರ್ಮಿ ರಾಜನು ಅಪಾರ ಆಸುರೀಸೈನ್ಯದೊಂದಿಗೆ ಆಕ್ರಮಣಮಾಡಿದನು, ಎಲ್ಲೆಲ್ಲೂ ಅತ್ಯಾಚಾರ ಅನಾಚಾರ, ಮತಾಂತರ ಮಾಡುತ್ತ ಹಾಹಾಕಾರವೆಬ್ಬಿಸಿದನು, ಶಾಂತನು ಸುಮ್ಮನಾಗಲಿಲ್ಲ. ಅವನ ಕೃತ್ಯವನ್ನು ಖಂಡಿಸಿ, ಮೇಲೆ ಮೇಲೆ ಪ್ರತಿಭಟನಾಪತ್ರಗಳನ್ನು ಕಳುಹಿಸಿದನು. ಸಂಧಾನಕ್ಕೆ ಮುಂದಾದನು. ಆದರೆ, ಆಸುರೀಭಾವದ ಶತ್ರುರಾಜನು ಇವನ ದೌರ್ಬಲ್ಯದ ಲಾಭದಿಂದ ಇವನ ಸಾಮ್ರಾಜ್ಯವನ್ನೇ ವಶಪಡಿಸಿಕೊಂಡನು. ತನಗಿನ್ನು ಸೆರೆಮನೆಯೇ ಗತಿಯೆಂದು ಅಂಜಿದ ಶಾಂತನು ಓಡಿಹೋಗಿ ಒಂದು ಕಾಡಿನಲ್ಲಿ ಅವಿತನು. ಶಾಂತರಾಜನನ್ನು ಹಿಡಿದುಕೊಟ್ಟವರಿಗೆ ಒಂದು ಲಕ್ಷರೂ. ಬಹುಮಾನ ಕೊಡುವುದಾಗಿ ದುರ್ಮೇಧನು ಡಂಗುರ ಸಾರಿದನು. ಪರಿಣಾಮವಾಗಿ ಸೌದೆಕಡಿವವರಿಬ್ಬರು ಅವನನ್ನು ಹಿಡಿದುಕೊಟ್ಟು ಬಹುಮಾನ ಪಡೆದರು. ಶಾಂತನು ಬಂಧನಕ್ಕೊಳಗಾದನು. ನಾಡಕೂಟ ಎಂಬ ಸುಮಾಜ ಸಂಘಟನೆ ಆಗ ಬಹಳ ಪ್ರಭಾವಿತವಾಗಿದ್ದಿತು. ಹಿಂದೆ ಅದನ್ನು ನಿಂದಿಸುತ್ತಿದ್ದ ಪಂಡಿತಂಮನ್ಯರೂ ಈಗೀಗ ಅದನ್ನು ಮೆಚ್ಚಿ ಅದರಲ್ಲಿ ಸೇರಿ ಸ್ಫೂರ್ತಿ ಪಡೆದು, ರಾಷ್ಟ್ರಸೇವೆಗೆ ಮುಂದಾಗುತ್ತಿದ್ದರು. ದುರ್ಮೇಧನ ದೃಷ್ಟಿ ಅದರ ಮೇಲಿದ್ದರೂ ಅದರ ಪ್ರಾಬಲ್ಯವನ್ನು ಅರಿಯದಿದ್ದನು; ಅದರ

ಶಕ್ತಿಯನ್ನು ಕುಗ್ಗಿಸಲಾರದಿದ್ದನು. ದೇಶದ ಎಲ್ಲೆಡೆಯೂ (ಸರಕಾರದ ಇಲಾಖೆಗಳಲ್ಲಿ ಕೂಡ) ನಾಡಕೂಟದ ಸ್ವಯಂಸೇವಕರಿದ್ದರು. ಇದರಿಂದ ದುರ್ಮೇಧನ ಅನಾಚಾರ ತಾನಾಗಿಯೇ ಕುಗ್ಗಿತು. ಕಡೆಗೆ ಅನಿವಾರ್ಯವಾಗಿ ರಾಷ್ಟ್ರಕ್ಕೆ ಪೂರ್ಣಸ್ವಾತಂತ್ರ್ಯವಿತ್ತು ಅವನು ತೆರಳಬೇಕಾಯಿತು. ಈಗ ಶಾಂತನು ಬಂಧಮುಕ್ತನಾದನು. ಜನತಂತ್ರ ಶಾಸನಪದ್ಧತಿ ನೆಲೆಗೊಂಡಿತು. ಒಂದು ಬಿಂದು ರಕ್ತಪಾತವೂ ಆಗದೆ ಸ್ವಾತಂತ್ರ್ಯ ಪ್ರಾಪ್ತಿಯೊಂದಿಗೆ ರಾಮರಾಜ್ಯ ಸ್ಥಾಪಿತವಾಯಿತು. ಎಲ್ಲರಲ್ಲೂ ರಾಷ್ಟ್ರಭಕ್ತಿ ಜಾಗೃತವಾಗಿದ್ದುದರಿಂದ ದೇಶದೊಳಗೆ ಕಳ್ಳರು, ಕಪಟಿಗಳು, ಕೊಲೆಗಾರರು, ದರೋಡೆಕೋರರು, ಉಗ್ರಗಾಮಿಗಳು, ಪರಪೀಡಕರು ಇಲ್ಲವಾದರು. ಬಡತನವಿಲ್ಲವಾಯಿತು. ಗೋಹತ್ಯಾನಿಷೇಧ, ಮದ್ಯಪಾನನಿಷೇಧ, ಧೂಮಪಾನನಿಷೇಧಗಳು ತಾನಾಗಿಯೇ ಉಂಟಾದವು. ವರ್ಣದ್ವೇಷ ಜಾತಿದ್ವೇಷಗಳಿಲ್ಲವಾಗಿ ಸದಾಚಾರ ನೆಲೆಗೊಂಡಿತು.

(ಈ ಕೃತಿಯಲ್ಲಿ ಮೂರನೆಯದು—ಯಕ್ಷಗಾನ.
ಅದರ ಪೂರ್ವಪರಿಚಯ : ಪುಟ-೭೧)

— —

ಸಂಘಶಕ್ತಿ ಕಥನಗೀತದ ಧಾಟಿ ವಿವರ :

1. ಸ್ಫೂರ್ತಿಪರ್ವ : ಪಂಚಮಾತ್ರಾಗಣ 3 + 1 ಪದ್ಮಗಣ
ಝಂಪೆತಾಳ ಪುಟ : 1—5
2. ಚಾರಿತ್ರಪರ್ವ ; ಚತುರ್ಮಾತ್ರಾಗಣ 7 + 1 ಪದ್ಮಗಣ
'ಘನಘನಕಲಶ ಟಿಕೋರೇ ಬೋಲೇ' ಎಂಬಂತೆ 5—12
3. ಅಭ್ಯುದಯಪರ್ವ: ಅಂಶಲಯ, 3 ವಿಷ್ಣು + 1 ಬ್ರಹ್ಮಗಣ 12—15
4. ಕರುಣಪರ್ವ : ಷಣ್ಮಾತ್ರಾಗಣ 3 + 1 ಮುಡಿ ಮತ್ತು ವರಣ
'ಹಿಂದುವೀರಾ ಭಿನ್ನಭಾವ ಬಿಟ್ಟು ಬಾರಯ್ಯ' ಎಂಬಂತೆ 15—21
5. ಸತ್ಯಾಗ್ರಹಪರ್ವ: ಗಣಪರಿವೃತ್ತಿಯ ಚತುರ್ಮಾತ್ರಾ ಗಣ7 + 1 ಮುಡಿ
'ಹಿಂದುಭೂಮಿಕಾ ಕಣಕಣಹೋ' ಎಂಬಂತೆ 22—24

ಯಕ್ಷಗಾನ ಅಫಜುಲಖಾನ ವಧೆ

ಇದೊಂದು ನವೀನ ಯಕ್ಷಗಾನ ಪ್ರಸಂಗ. ಇದರ ಕಥಾವಸ್ತು ಐತಿಹಾಸಿಕ ರಾಷ್ಟ್ರವೀರ ಶಿವಾಜಿಯ ಚರಿತ್ರೆಗೆ ಒಳಪಟ್ಟಿದೆ. ಮಹಾ ಕಪಟಿಯೂ ರಾಷ್ಟ್ರಧರ್ಮಘಾತಕನೂ ಬಲಿಷ್ಠನೂ ಆದ ಅಫಜುಲಖಾನನು ಬಿಜಾಪುರದ ಸುಲ್ತಾನ ರಾಣಿಯ ಮಂತ್ರಿಯೂ ಸೇನಾಪತಿಯೂ ಆಗಿದ್ದು, ತಾನು ಆ ಶಿವಾಜಿಯನ್ನು ಕೊಂದು ಬರುವುದಾಗಿ ಪ್ರತಿಜ್ಞೆ ಮಾಡುತ್ತಾನೆ, ಸ್ನೇಹದ ಸಂಚುಮಾಡಿಕೊಂಡು ಶಿವಾಜಿಯ ಬಳಿಗೆ ಬರುತ್ತಾನೆ. ಅವನ ಕಪಟದ ವಾಸನೆಯನ್ನರಿತ ವೀರ ಶಿವಾಜಿ ಸಂಚಿನ ಅವಧಿವೇಳೆಯಲ್ಲಿ ಮಿಂಚಿನಂತೆ ರುದ್ರಭೀಮನಾಗಿ, ತನ್ನ ವ್ಯಾಘ್ರನಖದಿಂದ ಆತನ ಕರುಳು ಬಗೆಯುತ್ತಾನೆ. ಸಣ್ಣ ಬಯಲಾಟದ ಅಥವಾ ತಾಳಮದ್ದಳೆಯ ಕಾರ್ಯಕ್ರಮಕ್ಕೆ ತಕ್ಕಂತಿದೆ–ಈ ಕಥಾವಸ್ತು,

ಯಕ್ಷಗಾನ ತಾಳಮದ್ದಳೆ ಅಥವಾ ಬಯಲಾಟ ಇರುಳಿಡೀ ಸುಮಾರು ಎಂಟುಗಂಟೆಗಳ ಸಾಂಸ್ಕೃತಿಕ ಕಲಾ ಕಾರ್ಯಕ್ರಮ, ಆದರೆ, ಆಧುನಿಕ ಶ್ರೋತೃ ಪ್ರೇಕ್ಷಕರಿಗೆ. ಆದರಲ್ಲಿಯೂ ಇದರ ಪರಿಚಯ ಸಾಕಷ್ಟಿಲ್ಲದವರಿಗೆ, ಪಟ್ಟಣಿಗರಿಗೆ, ಈ ಕಲಾ ಪ್ರದರ್ಶನ ಅದೆಷ್ಟೇ ರಸರಂಜಕವಾಗಿದ್ದರೂ ಅಷ್ಟು ಹೊತ್ತು ಆದರಲ್ಲಿ ಮಗ್ನರಾಗುವ ವ್ಯವಧಾನವಿರುವುದಿಲ್ಲ, ಅಲ್ಪಸಮಯದಲ್ಲಿ ಬಹು ಫಲನಿರೀಕ್ಷೆ ಈ ಕಾಲದ ಧೋರಣೆ. ಅದಲ್ಲದೆ, ಏನಾದರೂ ವಿಶೇಷ ಸಮಾರಂಭದ ಕೊನೆಗೆ ಸ್ವಲ್ಪಹೊತ್ತಿನ ಮನೋರಂಜನೆಯೊಂದಿಗೆ ಇತಿಹಾಸದ ಮತ್ತು ಅದರಲ್ಲಿ ಅಡಗಿದ ನೀತಿಯ ದರ್ಶನ ಆಗುವಂತೆ ಕಥಾವಸ್ತುವನ್ನು ನಿಯೋಜಿಸಿದ ವೈಶಿಷ್ಟ್ಯವೂ ಇಲ್ಲಿದೆ. ಸುಮಾರು ೪೮ ವರ್ಷಗಳ ಹಿಂದೆಯೇ ರಚಿತವಾದುದು. ಇದನ್ನು ರಸಿಕರು ಮೆಚ್ಚಿಕೊಳ್ಳುವರೆಂದು ಭಾವಿಸಲಾಗಿದೆ.

(ರಚನೆ: 1947)

ಪ್ರೊ|| ಟಿ. ಕೇಶವ ಭಟ್ಟ

ಕವಿಪರಿಚಯ

ಈ ಯಕ್ಷಗಾನ ಪ್ರಸಂಗ ರಚನೆ ಮಾಡಿದವರು, ವಿದ್ವಾನ್ ತಾಳ್ತಜೆ ಕೇಶವ ಭಟ್ಟರು. ಇವರು ಶಿಕ್ಷಣ, ಸಾಹಿತ್ಯ, ಯಕ್ಷಗಾನ, ಗಮಕ ಕಲಾ ಪ್ರವೀಣರು. ಮೊದಲು ಪ್ರಾಥಮಿಕ ಶಾಲಾಧ್ಯಾಪಕರಾಗಿದ್ದು, ಹೈಸ್ಕೂಲು ಕನ್ನಡ ಪಂಡಿತರಾಗಿ ಶಿಕ್ಷಕ ತರಬೇತಿ ಕಾಲೇಜು ಅಧ್ಯಾಪಕರಾಗಿ, ಪ್ರಥಮದರ್ಜೆ ಕಾಲೇಜು ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯು. ಜಿ. ಸಿ. ಸಂಶೋಧಕರಾಗಿಯೂ ಸಾಹಿತ್ಯ ಸೇವೆ ಮಾಡಿರುತ್ತಾರೆ. ಕನ್ನಡದಲ್ಲಿ ತುಂಡುಪದ, ಕವನ, ಕಾವ್ಯ, ಗ್ರಂಥಸಂಪಾದನೆ ಸಂಶೋಧನೆ, ವಿಮರ್ಶೆ, ಅನುವಾದ, ಪ್ರಬಂಧ, ವ್ಯಾಕರಣ, ಶಬ್ದಕೋಶ- ಮುಂತಾದ ವೈವಿಧ್ಯಮಯ ೨೮ ಉದ್ಗ್ರಂಥಗಳನ್ನಲ್ಲದೆ, ನೂರಾರು ವಿಶೇಷ ಲೇಖನಗಳನ್ನೂ ಬರೆದಿರುತ್ತಾರೆ. ಇವರ **ಸತ್ವಾಲೋಕನಂ** ಚಂಪೂಕಾವ್ಯಕ್ಕೆ ರಾಜ್ಯಪ್ರಶಸ್ತಿ (1960), **ಸಂಶೋಧನ ರತ್ನಮಾಲಿಕೆಗೆ** ಮೈಸೂರು ವಿಶ್ವ ವಿದ್ಯಾಲಯದ ಸುವರ್ಣ ಪ್ರಶಸ್ತಿ (1972), **ಹವ್ಯಕರ ಶೋಭಾನೆಗಳು** ಎಂಬ ಯು. ಜಿ. ಸಿ, ಯೋಜನೆಯ ಗ್ರಂಥಕ್ಕೆ ಯಕ್ಷಗಾನ ಜಾನಪದ ಅಕಾಡೆಮಿಯ ಬಹುಮಾನ (1988), ಪ್ರಾಪ್ತವಾಗಿದೆ.

ವಿ॥ ಕುದ್ರೆಕೋಡ್ಲು ರಾಮ ಭಟ್ಟರ ಮತ್ತು ಮಾಂಬಾಡಿ ನಾರಾಯಣ ಭಾಗವತರ ಶಿಷ್ಯರಾಗಿ ಯಕ್ಷಗಾನವನ್ನು ಶಾಸ್ತ್ರೀಯವಾಗಿ ಹಾಡಲು ಮತ್ತು ಮದ್ದಳೆಬಾರಿಸಲು ಕಲಿತು, ಪ್ರಯೋಗ ಪರಿಣತಿಯನ್ನೂ ಮೆರೆದವರು. ಹಿಂದಿನ ಬಲಿಪ್ಪ ಭಾಗವತರು, ಪುತ್ತಿಗೆ ಜೋಯಿಸರು, ಮಾಂಬಾಡಿ ಭಾಗವತರು, ಪುಟ್ಟುನಾರಾಯಣ ಭಾಗವತರು, ಮೈಂದಪ್ಪರೈ, ತಲೆಂಗಳ ಚಕ್ಕುಲಿಭಾಗವತರು, ಮಹಾಬಲ ಮಾಸ್ತರರು, ಈಗಿನ ಕಡತೋಕ ಮಂಜುನಾಥ ಭಾಗವತರು- ಮುಂತಾದ ಪ್ರಸಿದ್ಧ ಪರಿಣತ ಭಾಗವತರ ಪದಕ್ಕೆ ಮೆಚ್ಚುವಂತೆ ಮದ್ದಳೆ ಬಾರಿಸಿರುವ ಕಲಾನುಭವಿಯಾಗಿರುತ್ತಾರೆ. ಚೆಂಡೆ ಮದ್ದಳೆಗಳ ವಾದನದಲ್ಲಿ ಇಂದು ಅಗ್ರಗಣ್ಯರಾದ ಶ್ರೀ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರಿಗೆ ಮದ್ದಳೆ ತಾಳ ಕಲಿಸಿದ ಪ್ರಥಮ ಗುರು.

ಪ್ರಕಾಶಕರು :

ಚಿರಸಾಹಿತ್ಯ ಪ್ರಕಾಶನ

/54, 15ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70

ಯಕ್ಷಗಾನ ಅಫಜುಲಖಾನ ವಧೆ

ಕಂದ ॥ ಶ್ರೀಗಣಪಂ ಸದ್ಬುದ್ಧಿ
ಶ್ರೀ ಗಣಪಂ ವಿಘ್ನನಾಶಮೆಸಗುಗೆ ವಿದ್ಯಾ
ಶ್ರೀ ಗುಣಯುತೆ ವಾಗ್ದೇವತೆ
ಯೀ ಗುಣಯುತ ಕೃತಿಯ ನಡೆಸು ಕವಿ ಕೇಶವನಿಂ ೧

ಶಾರ್ದೂಲ ವಿಕ್ರೀಡಿತವೃತ್ತ ॥
ಶ್ರೀ ಗೌರೀರಮಣಂ ಭವಾಬ್ಧಿ ತರಣಂ ಭಿಕ್ಷಾಶಿ ಸರ್ವಾರ್ಥದಂ
ರಾಗತ್ಯಾಗಗುಣಂ ಮಹಾಗ್ನಿ ನಯನಂ ಗಂಗೋತ್ತಮಾಂಗಾನ್ವಿತಂ
ನಾಗೇಂದ್ರಾಭರಣಂ ಶಶಾಂಕಧರಣಂ ಶಾಂತೋಗ್ರನಾಗಿರ್ಪ ವೇ
ದಾಗಮ್ಯಂ ಪೊರೆಗೆಮ್ಮನೀಶನನಿಶಂ ಶ್ರೀ ಪಂಚಲಿಂಗೇಶ್ವರಂ ೦

ರಾಗ : ಸುರಟಿ, ಏಕತಾಳ

ಭಾರತ ಭೂಮಾತೇ । ಜಯ ಜಯ । ಧಾರಿಣಿ ವಿಖ್ಯಾತೇ ॥ಪಲ್ಲವಿ॥
ವಾರಿಧಿಘನಗಂ । ಭೀರೆ ಹಿಮಾಚಲ । ಧೀರೆಯೆ ಜಲಫಲ ಪೂರಿತೆ ಸನ್ನುತೆ॥
ಭಾರತ ಭೂಮಾತೇ ॥ ೧ ॥ ಸಹನಾಗುಣಶೀಲೇ । ಧರ್ಮದ ಕಹಳಾರವ
ಲೋಲೇ ॥ ಮಹನೀಯರ ವೀರರ ಸುಜ್ಞರ ಪೆತ್ತಿಹ ಪರಸುಖಕರೆ
ಸತ್ಯನಾತನೆ ॥ಭಾರತ ಭೂಮಾತೇ ॥ ೨ ॥ ವೀರಜನನಿ ತಾಯೇ ।
ಪರಮಾ 1 ರ್ಥಾರತ ಮತಿಯೀಯೇ॥ ಕಾರಣಪುರುಷರಾ ಮಾಧವ ಮುಖ್ಯರು।
ಸಾರಿದ ದಾರಿಯ ತೋರಿಸಿ ಕರುಣಿಸು ॥ ಭಾರತ ಭೂಮಾತೇ ॥ ೩ ॥

ಕರದ ॥ ಇತಿಹಾಸ ಕಥನವುಂ ಭೂ
ಪತಿ ಶಿವನಫಜುಲನನಂದು ವಧಿಸುತೆ ಧರ್ಮೋ
ನ್ನತಿಗೆಯ್ದುದನೊರೆವೆಂ ಸ
ನ್ನುತಮೆನಿಸುವ ಯಕ್ಷಗಾನ ಪದಕವಿತೆಗಳಿಂ ೧

ವಾರ್ಧಕ್ಯ ॥
ರಾಜವಂಶಜನಾ ಶಿವಾಜಿನೃಪನೊಂದುದಿನ
ರಾಜದುರ್ಗದೆ ತನ್ನ ಮಂತ್ರಿ ಸೇನಾಪತಿ ಸ

ಮಾಜದೊಡನೊಪ್ಪಿರ್ದನಾ ರಾಜನಂತೆ ನಕ್ಷತ್ರಚಕ್ರದ ಮಧ್ಯದಿ॥
ರಾಜಿಸುತ್ತಿರಲು ಮೋರೋಪಂತ ಪಿಂಗಳೆಯು
ಬಾಜಿರಾಯನು ರಾಘುಬಲ್ಲಾಳನೆಸೆವ ಗೋ
ಮಾಜಿನಾಯಕ ಸೋನದೇವ ಮುಂತಾದವರು ನುಡಿದನಾ
ಸಭೆಯೊಳಂದು ೧

ರಾಗ : ಭೈರವಿ. ಝಂಪೆತಾಳ

ಕೇಳಿ ಪಟುಭಟರೆಲ್ಲ । ಶೀಲನಿಧಿಗಳು ಸೊಲ್ಲ
ಮೇಳಗೊಂಡೆನ್ನೊಡನೆ । ಬಾಳಿನಾ ರಣದಿ ॥
ಖೂಳರೊಳು ಯುಕುತಿಯೊಳು । ಕಾಳೆಗಂಗಳೊಳು ನಾ
ವೀಳುಗೊಂಡೆವು ಹಲವು । ಮೇಲುಕೋಟೆಗಳ ೧

ಮುನಿಸಿನಿಂದೆನ್ನೊಳಗೆ । ಜನಕನ ಬಿಜಾಪುರದ
ಜನಪನಿಡೆ ಪಿಡಿದು ಬಂಧನದೊಳಾ ವೇಳೆ ॥
ಮನಸೆಳೆದು ದಿಲ್ಲೀಶ್ವ । ರನ ನಿರೂಪವ ಕಳುಹಿ
ಜನಕನನು ಬಿಡಿಸಿದೆವು । ಜನರು ಮೆಚ್ಚುತಿರೆ ೨

ಭಾರತದೊಳಾಕ್ರಮಣ । ಕಾರಿಗಳ ತಡೆಯುತ್ತ
ಪಾರತಂತ್ರ್ಯವ ಮುರಿದು । ಭೂರಿ ವಿಕ್ರಮದಿ ॥
ಗೌರವದಿ ನಿಜತಂತ್ರ । ಸಾರವನು ನೆಲೆಗೊಳಿಪ
ಧೀರಕಾರ್ಯವಿದುಚಿತ । ವೀರರಿಗೆ ನಮಗೇ ೩

ಹಿಂದುಧರ್ಮವನುಳುಹಿ । ಬಂಧುಭಾವವ ಗಳಿಸಿ
ಬಂಧುರದ ಸಂಸ್ಕೃತಿಯ । ಹೊಂದಿ ಚಿರವಾಗಿ ॥
ಹಿಂದುರಾಜ್ಯದ ವಿಭವ । ದಂದವನು ಮೂಜಗದ
ಮುಂದಿಡುವ ಕಾರ್ಯವೆ । ಮ್ಮೊಂದಾಗಬೇಕು ೪

ಪರಿಯನೆಲ್ಲವ ತಿಳಿದು । ಗುರಿಯ ತಪ್ಪದೆ ಪಿಡಿದು
ಮರೆಯದೆಯೆ ರಾಷ್ಟ್ರೀಯ । ಪರಮ ಕಾರ್ಯವನು ।

ನೆರೆಯಿಸುತ್ತಾತ್ಮಿಕರ | ನಿರಿಯೆನುತ ನಿಜಸಭೆಯ
ಹಿರಿಗಜ್ಜ ಮುಗಿಸಿದನು | ನರಪತಿ ಶಿವಾಜೀ ೫

ಭಾಮಿನಿ :

ವರ ಬಿಜಾಪುರ ರಾಜ್ಯದಲಿ ಭೂ
ವರನಹಮ್ಮದ ಆದಿಲಷಹನಳಿ
ದಿರಲು ಮಗನಪ್ರಾಯನಿರಲವನರಸಿಯಾಳುತಿರೇ
ನೆರೆದ ತನ್ನಯ ಸುಭಟ ಮಂತ್ರೀ
ಶ್ವರರ ರಾಜಸಭಾಂತರಾಳದಿ
ಸುರುಚಿರಾಸನದಲ್ಲಿ ಯೋಗಲವಿತ್ತಳೊಂದು ದಿನ ೧

ಕಂದ || ಆಗಲದೋರ್ವಂ ಚಾರಂ
ಬೇಗದೆ ಬರುತುಂ ಸಲಾಮುಗೈಯುತೆ ದನಿಯುಂ ||
ಪೋಗಿರೆ ನುಡಿದಂ ರಾಜ್ಯ
ಕ್ಕಾಗಿಹ ಸೋಲ್ಗಳ ಸಮಸ್ತ ಘಟನೆಗಳೆಲ್ಲಂ ೧

ರಾಗ : ಮುಖಾರಿ, ಏಕತಾಳ

ರಾಣಿ ಕೇಳ್ ಕೇಳಮ್ಮ ವೃತ್ತಾಂತಗಳ | ನಮಗಾದ ಸೋಲ | ರಾಣಿ |ಪಲ್ಲವಿ|
ಸಾಟಿಯು ಕಾಣೆ ಕುತಂತ್ರಕೆ ನಮ್ಮಯು | ಕೋಟೆಗಳೆಲ್ಲ ಮರಾಟರ ಕೈವಶ
ಏಟ ಸಹಿಸಲೇನಾಟವೆ ಯುವನರು| ಕೂಟುತಪ್ಪಿ ಮಣ್ಣೂಟವ
ಗೈದರು ರಾಣಿ ೧
ತೋರಣದುರ್ಗ ಪುರಂದರ ಚಾಕಣ | ವಾ ರಾಯನಿಗಿವು ಮೊದಲೇ ಸೇರ್ದವು
ಶೂರತೆಯೊಳು ಕೊಂಡಾಣವ ಕೊಂಡನು | ಗಾರುಗೆಡಿಸುತ ನಮ್ಮವರೆಲ್ಲರ ||
ರಾಣೀ ೨
ಆನೆ ಕುದುರೆ ಮೇಲೇರುತ ಬರುವರು | ಸೇನಾಬಲವಿದಿರಿಸೆ ಕಾಲ್ಗೊಡುವರು
ಹಾನಿ ನಮ್ಮ ಸಂಸ್ಥಾನಕ್ಕಾದುದ | ನಾನಷ್ಟಿಷ್ಟೆಂದೂಹಿಸಲಾರೆನು ||
ರಾಣಿ ೩
ಎಲ್ಲಿಯೆ ನೋಡಿದೊಡಲ್ಲಿಹರಾತನ | ಕೊಳ್ಳೆಹೊಡೆವ ಜನರೆಂದೆನೆ ರಾಣಿಯು
ನಿಲ್ಲಿಪೆನಿದನೆಂದಲ್ಲಿಯೆ ತನ್ನಯ | ಮಲ್ಲರ ಕರೆದುರೆ ಸಲ್ಲಾಪಿಸಿದಳು ೪

ರಾಗ : ಕಾಂಬೋಧಿ, ಝಂಪೆತಾಳ

ಕೇಳಿರಿಸ್ಲಾಮ ಮತ । ಮೌಳಿಮಣಿಗಳೆ ವೈರಿ । ಜಾಲಗಳು ಸಮಯ ಕಾದಿಹವು ॥ ತಾಳಿ ಕುಳಿತಾಗಲವ । ರೇಳಿಗೆಯು ಶೌರ್ಯಗಳು । ತಾಳೆಯಂ ತೇರುವವು ದಿಟವು ॥೧॥ ಒಡಗೂಡಿ ಕಾಡಿಗರ । ಗಡಣವನು ಕಾಫಿರರ । ಹುಡುಗನೊಬ್ಬನು ಕೈದುವಿಡಿದು ॥ ಕಡುಗಲಿಗಳೆಮ್ಮವರ । ಬಡಿವ ಸುದ್ದಿಯು ನಮಗೆ । ಕಡುನಾಚಿಕೆಯನೆ ಮಾಡುವದು ॥ ೨ ॥ ಈ ರೀತಿಯಾದರೀ । ಧಾರಿಣಿಯೊಳಿಸ್ಲಾಮು । ಚೂರುಳಿಯಲಿಹುದೆ ಕಾಫಿರರು ॥ ಈ ರಾಜ್ಯವಾಳೆ ಕ ಣ್ಣಾರೆ ಕಾಣುತ ನಮ । ಸ್ಕಾರ ಮಾಡುತ್ತ ಬಾಳುವೆವೇ ? ॥೩॥ ನಮ್ಮರಬಿ ಭಾಷೆಯನು । ನಮ್ಮಡುಗೆ ತೊಡುಗೆಯ ಮ । ಹಮ್ಮದೀ ನಾಮವನು ಬಿಸುಟು ॥ ನಮ್ಮದೆಂಬೆವೆ ಹಿಂದುಸಂಸ್ಕೃತಿಯ ದೇಶವನು । ನಮ್ಮಲ್ಲನಿದಕೆ ಮೆಚ್ಚುವನೆ ? ೪

ಭಾಮಿನಿ

ರಾಣಿಯಿಂತೆಂದಾಕ್ಷಣವೆ ಕಂ
ಗಾಣದತಿಮದ ರೋಷದಿಂದಾ
ಸ್ಥಾನವಿರಲಾ ಮೌನತೆಯ ತತ್‌ಕ್ಷಣದೆ ಖಂಡಿಸುತ
ಬಾನ ನೆಲ ದೆಸೆ ನಡುಗೆ ನಿಜ ಸು
ತಪ್ರಾಣಯುತ ಶಬ್ದಕ್ಕೆ ಪೃಥುಳ
ಪ್ರಾಣಿಯಫಜುಲಖಾನನೆಂಬಾ ಮಂತ್ರಿ ಬೊಬ್ಬಿರಿದ ೧

ರಾಗ-ಸೌ, ತಾಳ-ತ್ರಿ

ಹಿಂದುಮುಂದಕೆ ನೋಳ್ಪಿರೇತಕ । ದೊಂದು ಕಾಡಿನ ಕೋತಿ ಭೀತಿಯೊ
ಳಿಂದೆ ನನ್ನನು ಕಳುಹಿ ನೋಡಿರಿ । ಮುಂದೆ ಕಥೆಯಾ ೧
ಎನ್ನ ಪೌರುಷತಂತ್ರಬಲ ಸಂ । ಪನ್ನ ಕರ್ತರಿ ಗಿರಿಯ ಮೂಷಕ
ನನ್ನು ಕೊಲ್ಲದೆ ಬಿಡದು ಹೊಟ್ಟೆಯ । ಬೆನ್ನನವುಕೀ ೨
ಹಸುಗಳನು ತುಂಡರಿಸಿ ವಿಪ್ರರ । ಹೊಸೆದು ಕೊಲ್ಲುವೆನವರ ಸತಿಯರ
ಕಸಿದು ತರುವೆನು ಹರಿಸಿ ಹಿಂದೂ । ಶಿಶುಗಳನ್ನು ೩

ಆ ಶಿವಾಜಿಯು ಬಯಲಿಗೆಳೆವೆನು । ಮೋಸವಾದರು ಮಾಡುತವೆ ಕರ
ಪಾಶದಲಿ ಬಂಧಿಸುತ ಖಡ್ಗದಿ । ನಾಶಗೈವೆ ೪

ಭಾಷೆಯಿದೊ ನಾನವನ ಕೊಲದಿರೆ । ದೋಷವಿಸ್ಲಾಮಿಂಗೆ ಬಗೆದವ
ನೀ ಸಭೆಯು ಹೊಗೆನೀ ಮಹೀಶೆಯು । ದಾಸನಲ್ಲಾ ೫

ವಾರ್ಧಕ್ಯ

ಆ ನುಡಿಯಂ ಕೇಳ್ದು ಸುಲ್ತಾನ ರಾಣಿಯು ತೋಷ
ಮಾನುತಫಜುಲಗೆ ನಲ್ಲುಡುಗೊರೆಗಳನು ಕೊಡಿಸಿ
ಸೇನಾಧಿಪತ್ಯಮಂ ಕಟ್ಟಿ ಸಂಸ್ಥಾನಕಂಟಕವ ಹರಿಸಲು ಬೆಸಸಲು
ನಾನೀಗ ಹಿಂಜರಿಯೆನೆಂದಾಗ ಹುಸ್ಸೇನ
ಖಾನನವನುಬ್ಬುತೆ ಮಹಮ್ಮದೀ ದಾನವಂ
ತಾನವಂ ಕೆಂಗಣ್ಣ ಭೀಕರಾಕೃತಿಯಿಂದೆ ವಂದಿಸುತ್ತಿಂತೆಂದನು ೨

ರಾಗ-ನಾದನಾಮಕ್ರಿಯೆ, ಅಷ್ಟತಾಳ

ಅವನೊಡನೆನ್ನನು ಕಳುಹು । ಯುದ್ಧ । ದವನಿಯೊಳ್ ತೋರ್ಪೆನು ಬಲುಹು
ಸವರಿ ಕಾಫಿರರ ವೃಂದವನು । ತೋ । ಷವನಲ್ಲಗೊದಗಿಪೆ ನಾನು ೧

ಟೊಪ್ಪಿಯವರ ತಲೆಗಿರಿಸಿ । ಪಳ್ಳಿ । ಗೊಪ್ಪಿಸಿ ಸರಿಬಾಂಕು ಕೊಡಿಸಿ
ತಪ್ಪದೆ ಮಾಡೆ ನಿಮಾಜ । ತಾ । ವೊಪ್ಪದವರ ಕೊಲ್ವೆ ಸಾಜಾ ೨

ಷಹಜಿ ಸೂನುವನಟ್ಟಿ ಹಿಡಿದು । ಗರ್ವ । ಸಹಿತವೆ ಮುರಿದುರೆ ಜಡಿದು
ಕುಹಕಿಗೆ ಸುನ್ನತಮಾಳ್ಪೆ । ಇಲ್ಲ । ಸಹಿಸೆನು ಶಸ್ತ್ರದಿ ಕೊಲ್ವೆ ೩

ಎಂದೊಡಪ್ಪಣೆಯನ್ನು ಪಡೆದು । ಯೋಧ । ವೃಂದದೊಡನೆ ಹಿಂದೆ ನಡೆದು
ಒಂದುಗೂಡಿದನಫಜುಲನ । ವಾರ್ಧಿ । ಯಂದದೆ ತೋರಲು ಸೈನ್ಯ ೪

ಒಲಿದು ಹುಸ್ಸೇನನ ಕೂಡೆ । ಅಫ । ಜುಲನೆಂದನಿದುವಿಲಿ ಬೇಟೆ
ಕಲಿತನ ಯುಕುತಿಯ ಪಿಡಿವಾ । ಕೊಲೆ । ಸುಲಿಗೆಯು ಮಾಡುತ್ತ ನಡೆವ ೫

ರಾಗ-ಮಾರವಿ, ಏಕತಾಳ

ಐಸಾಸಿರ ಗೋಳಾಯ್ಲರ ಮತ್ತೇಳ್ | ಸಾಸಿರ ಕಾಲಾಳು |
ಸಾಸಿರ ಲೆಕ್ಕದ ಬಿಲ್ಲಾಳ್ಗಳಿನೋ | ಲೈಸುತ ಹೊರವಂಟ ೧
ದೇವಾಲಯ ಪಾಳ್ಗೆಡವುತ ಸಿಕ್ಕಿದ | ಗೋವುಗಳನು ಕೊಲುತ
ಧಾವಿಸಿದನು ತುಳಜಾಪುರನಾಮದ | ಪಾವನ ಸುಸ್ಥಳಕೇ ೨
ಇದುವೆ ಶಿವಾಜಿಗೆ ಪಾವನ ಮಂದಿರ | ಎದುವೆ ಭವಾನಿಯದು
ಸದೆದನು ಹಿಂದೂ ವೃಂದವ ಮಂದಿರ | ವದನು ಮುಸಣಗೈದು ೩
ಪಂಡರಪುರವನು ದಿಂಡುರುಳಿಸಿದನು | ಕಂಡೆಡೆ ಜನರೋಡೆ
ಹೆಂಡಿರ ಮಕ್ಕಳ ಸದೆದನು ಹಿಂದೂ | ರುಂಡಗಳುರುಳಿದವು ೪
ಎಲ್ಲಿಹ ನಿಮ್ಮಯ ಹಿಂದೂರಕ್ಷಕ । ನೆಲ್ಲಿಹನು ಶಿವಾಜಿ |
ಬಲ್ಲೊಡೆ ತೋರಿಸಿಯೆನ್ನುತ ಕಡುತರ | ಹೊಲ್ಲೆಹಗಳ ಗೈದಾ ೫

ಭಾಮಿನಿ

ಸತಿಯ ಪಾತಿವ್ರತ್ಯ ವೈದಿಕ
ಪತಿಯ ಶುದ್ಧಾಚಾರ ಪುತ್ರನ
ವಿತತ ಧರ್ಮವು ಕೆಟ್ಟುವೆತ್ತಲು ಚಿತ್ರಹಿಂಸೆಗಳ
ಕಥೆ ನಡೆಯುತಿರೆ ಸಾಧು ಸಜ್ಜನ
ತತಿಯು ಮರುಗಿತು ಭೀತಿಯಲಿ ಭೂ
ಪತಿ ಶಿವಾಜಿಯ ಕಂಡು ಬಿನ್ನಹಗೆಯ್ದುದತಿ ಭರದಿ ೧

ರಾಗ-ಕೇ. ಗೌ. ಅಷ್ಟತಾಳ

ಧರ್ಮಘ್ನರೆಸಗುವ । ನಿರ್ಮಮದುಷ್ಕೃತ್ಯ । ಮರ್ಮವು ದೊರೆಯೆ ಕೇಳು ॥
ಸುಮ್ಮನೆ ಮುರಿದರು । ನಮ್ಮ ದೇಗುಲಗಳ । ಹಮ್ಮು ತೋರಿಸುತಿಹರು ೧
ಮೆರೆವ ಭವಾನೀ ಮಂ । ದಿರ ನೆಲಸಮವಾಯ್ತು । ಬಿರಿದುದು ಪಂಡರದ
ಪರಮ ದೇವಾಲಯ । ಧುರದೊಳು ಕಾದುವ । ದೊರೆಗಳೆದುರು ಬಾರದೆ ೨

ಶಕ್ತಿಹೀನರೆಲ್ಲ । ಕುತ್ತಿ ಕೊಲ್ವರು ಹಿಂದು । ರಕ್ತದ ತೊರೆಗಳಿವೆ ॥
ಶಕ್ತ ನೀನಾರ್ತರ । ನೆತ್ತಿದೊಡಾರಿಂದು । ಕತ್ತಲಿನೊಳು ಸೂರ್ಯನು ೩
ಭೂಮಿ ಗೋದ್ವಿಜರಕ್ಷ । ನಾಮವ ತಳೆದ ಮ। ಹಾಮಹಿಮನೆ ಜಯತು
ಸ್ವಾಮಿಯು ಬಲ ದಯಾ। ಪ್ರೇಮದಿ। ಪೊರೆಯೆನ। ಲಾ ಮಂದಿಗಿಂತೆಂದನು ೪

ರಾಗ–ನವರೋಜು, ಏಕತಾಳ

ತಿಳಿದೆನು ನೀವೆಂದುದನು । ಆ । ಖಳರು ಗೈದೆಸಕವನು ॥ಪಲ್ಲವಿ॥
ಅಳುವಿದಕರ್ಮದ । ಫಲವಿನ್ನಾದರು । ಕಲಿಗಳನುರೆ ಸಂ ।
ಕಲನವ ಗೈಯಿರಿ ೧

ಶಕ್ತಿಯು ಸಂವರ್ಧಿಪುದು । ಸ । ದ್ಯುಕ್ತಿಯು ಸಂಸಿದ್ಧಿಪುದು
ಮೃತ್ಯುಗೆ ಬೆದರದೆ । ನಿತ್ತಲ್ಲಿಯೆ ದು । ರ್ವೃತ್ತರ ತಡೆಯುದೊ ।
ಡೆತ್ತಣ ರಕ್ಷಣೆ ೨

ಪೋಗಿರಿ ನಿರ್ಭಯರಾಗಿ । ಸಮ । ಯಾಗಮವೀಕ್ಷಿಪರಾಗಿ
ಬೇಗದಿ ಖಳರ ಸೀ । ಳಾಗಿಸಿ ಖಡ್ಗದಿ । ಮೇಗೆ ಸುಶಾಂತಿಯ ।
ನಾಗಿಸುವೆನು ದಿಟ ೩

ತವಕದಿ ಬೀಳ್ಕೊಟ್ಟೊಡನೆ । ಆ । ಶಿವನೃಪ ತನ್ನವರೊಡನೆ ॥ ಅವಸರಸಭೆ
ಕರೆದವರ ಬೆಸಸೆ ರೋ । ಷವ ತಳೆದೆಂದನು । ತವೆ ಚಾಜೀಪ್ರಭು ೪

ರಾಗ–ಭೈರವಿ, ಅಷ್ಟತಾಳ

ವೀರಶಿವೇಂದ್ರ ಕೇಳು । ಆ ಖಳರ ಸಂ । ಹಾರಕ್ಕೆ ತಡೆಯೇ ಕೇಳು ॥
ವೈರಿಭಯಂಕರ । ಶೂರರೆಮ್ಮವರಿಗೆ । ಹೋರಾಟಕಂಜಿಕೆಯೇ ೧

ಘನಕಪಟಿಯು ಖಾನನು । ಮುರಾರಿಪಂ । ತನನು ಶಂಭೂಜಿಯನು
ಹನನಗೈದವ ನಿನ್ನ । ಜನಕನನಂದು ಬಂ । ಧನದೊಳಿಡಿಸಿದಾತನು ೨

ಸಂಧಿಮಾತನು ಮಾಡೆವು । ಹಿಂದುಗಳನ್ನು । ಕೊಂದಾತನೊಡಗೂಡೆವು
ಹಿಂದುಭೂಮಿಯ ವೈರಿ । ವೃಂದವ ಸದೆದಳಿ । ದಂದಿದೆ ನಾಕವ ।
ಸುಂಧರೆ ಗೆದ್ದರೆ ೩

ಸ್ವಾತಂತ್ರ್ಯರಕ್ಷಣೆಯು । ನಮ್ಮಾರ್ಯ ವಿ । ಖ್ಯಾತ ನೀತಿ ಶ್ರೇಣಿಯು ॥
ಪ್ರಾಣವಿದ್ದರೆ ಶಿವ । ನಾಣೆ ದುಷ್ಟರ ಕೊಲ್ವೆ । ತಾನೆನೆ ಕೋಪದಿ ।
ತಾನಾಜಿ ಪೇಳ್ದನು ೪

ರಾಗ ಭೈರವಿ, ಏಕತಾಳ

ಸಮರಕೆ ತಡವಿನ್ನೇಕೆ । ಈ । ಶಮಯುವೆ ಪೊರಡದುದೇಕೆ ॥
ನಿಮಿಷದ ದೇಗುಲ ಜನರು । ನಿ। ರ್ಮಮ ಹನನವಗೊಳುತಿಹರು ೧

ಖೂಳರ ನಾಶವ ಗೈವೇ । ಆ । ಗೋಳಾಟವ ನಿಲ್ಲಿಸುವೇ ॥
ವೇಳೆಯು ಮೀಯೆನಗೆಂದಾ । ಕಲಿ । ಕಾಳೆಗ ನೀ ನೋಡೆಂದಾ ೨

ಭಾಮಿನಿ

ಹಗೆಯ ದುರ್ವರ್ತನೆಗಳುರೆ ಕೈ
ಮಿಗುತಿಹವು ಪಶು ಸಾಧು ಸಜ್ಜನ
ರುಗಳ ದೂರೇರುತಿದೆ ಯುದ್ಧಾತುರತೆಯಿಂದೆಮ್ಮ
ವಿಗಡಜೋದರು ಸಿದ್ಧರಿದು ದಿಟ
ಮಿಗೆ ತಡೆಯಿರೆಂದೆನುತ ತನ್ನೊಳ
ಗುಗುಂವ ಭಕ್ತಿಯು ಭರದಿ ತಾಯೆಡೆಗೆಯ್ದಿ ತಾನೆಂದ ೧

ರಾಗ-ಸಾಂಗತ್ಯ, ರೂಪಕತಾಳ

ಅಮ್ಮಾ ಕೇಳಫಜುಲ । ನೆಮ್ಮನು ಕೆಣಕುತ್ತ । ಹೆಮ್ಮೆಯೊಳ್ಳೈತಂದಿರುವನು
ಧರ್ಮ ದೇವಾಲಯ । ನಲ್ಮೆಯ ಹಸುಗಳ । ನಮ್ಮಮ್ಮಾ ನಶಿಸು
ತ್ತೈದಿಹನು ॥
ಮದವೇರಿ ದುರ್ವೃತ್ತಿ। ಹದಗೆಟ್ಟು ಲೋಕದ। ಹದುಳವ ಕೆಡಿಸುತ್ತಲಿಹನು॥
ಕದನದೊಳವನನು । ಸದೆಯದೆ ಬಿಡೆನು ನೀ । ನದಕನುಮತಿಯ
ನೀಡಮ್ಮ ೨

ಮಗನ ಮಾತಿಗೆ ಮೆಚ್ಚಿ । ನಗುತಿದು ರಾಷ್ಟ್ರದ । ಮಿಗಿಲಾದ ಕಾರ್ಯವು ರಣದಿ
ಮಿಗೆ ಯುಕ್ತಿ ಶಕ್ತಿಯ । ಹಗಲೊಡ್ಡಿ ಜಯಿಸೆಂದು ।
ಬಗೆದು ಬೀಳ್ಕೊಡೆ ಜೀಜಾಬಾಯಿ ೩

ವಾರ್ಧಕ್ಯ

ವೀರಮಾತೆಯ ಶುಭಾಶೀರ್ವಾದವಂ ಪಡೆದು
ಬೀರವೆಂಡತಿ ಸಖೀಬಾಯಿಯುತ್ತೇಜನದೆ
ಧೀರಶಿವನಾಹವವ ನಿಶ್ಚಯಿಸಿ ರಿಪು ಸೊಕ್ಕಿನಿಂ ಕುರುಡನಾಗಲೆಂದು ॥
ಪಾರಾಗಿ ಬದುಕಲೆಂದೋಡಿರ್ಪನೆಂದಲ್ಲಿ
ವೈರಿಜನರುಬ್ಬುತಿರೆ ನೇತಾಜಿ ಪಾಲ್ಕರರ
ಮೋರೊಪಂತರ ಕೂಡಿ ರಾಯಗಡದಿಂದಾ ಪ್ರತಾಪಗಡಮಂ ಪೊಕ್ಕನು ॥೧॥

ರಾಗ–ಶಂಕರಾಭರಣ, ಮಟ್ಟೈತಾಳ

ಇತ್ತ ದಾರಿದೂರದಲ್ಲಿ । ನಿತ್ತ ಸಭ್ಯಜನರ ಪಿಡಿದು । ಕತ್ತಹಿಸುಕಿ
ಕಣ್ಣ ತೋಡಿ । ಕುತ್ತಿಕೊಲುತಿರೇ ॥ ಸುತ್ತಿದಂಬರವನು ಸೆಳೆದು । ಮತ್ತರಾಗಿ
ಮನೆಯ ಸುಟ್ಟು । ಹೊತ್ತುವುದನು ನೋಡಿ ಹರ್ಷ । ಚಿತ್ತರಾದರು ॥೧॥
ಎಲ್ಲಿ ಪಹಜಿಸೂನು ಮ । ತ್ತೆಯಾತನಾಪ್ತವರ್ಗ । ವೆಲ್ಲಿಯವನ ಪೂಜನೀಯ
ರೆಲ್ಲಿ ಸೇರ್ದರು ॥ ನಿಲ್ಲದವರ ಪಿಡಿದು ಪಾಶ । ದಲ್ಲಿ ಕಟ್ಟಿಯಿಸ್ಲಾಮಿ ।
ನಲ್ಲಿ ಸೇರಿಸುವೆನು ಕೊಲ್ವೆ । ನೊಲ್ಲದಿರ್ದರೆ ॥೨॥ ಮುಂದಮತಿಯು
ಬೀಗುತಿರಲು । ಬಂದನೋರ್ವ ಗೂಢಚಾರ । ನಂದು ಪೇಳ್ದನಾ ಶಿವಾಜಿ ।
ನಿಂದ ತಾವನು ॥ ಇಂದು ಬೆದರಿ ರಾಯದುರ್ಗ । ದಿಂದಲಾ
ಪ್ರತಾಪಗಡಕೆ । ಬಂದು ಸೇರಿಕೊಂಡ ನೆಂಬು । ದೊಂದು ಸುದ್ದಿಯ ॥೩॥

ಭಾಮಿನಿ

ಖಾನನಾಕ್ಷಣ ಪಿಂತು ಬೆಂಬಿಡಿ ।
ದಾ ನರೇಶನ ಪಿಡಿಯಲಾರೆನು
ನಾನವನ ಸಂಧಾನ ನೆವನದಿ ಸೆಳೆವೆನೆಂದೆನುತ ॥
ಜಾಣನಹ ಕೃಷ್ಣಾಜಿಯನು ಸ
ನ್ಮಾನದಲಿ ಕರೆಯುತ್ತ ಪೇಳ್ದನು
ನೀನು ಪೋಗಿ ಶಿವಾಜಿಯೊಳು ಮಾಡಿಂತು ಸಂಧಿಯನು

ರಾಗ-ಸಾಂಗತ್ಯ, ರೂಪಕ ತಾಳ

ನನಗೂ ನಿನ್ನನು ಪೆತ್ತ 1 ವನಿಗೂ ಸುಸ್ನೇಹವು 1 ನನಗೆ ನೀ
ಮಗನಣೆಯಿಂತು 11
ಮುನಿಸಿಲ್ಲ ನಿನ್ನೊಳಿ 1 ನ್ನನುಭವಿಸೆಲೊ ನಿನ್ನ 1 ಜನಕನಂದದಿ
ಮೇಲು ಪದವ ॥ ೧

ನಿನ್ನಪ್ಪನಂತೆ ನೀ 1 ನಿನ್ನು ಬಿಜಾಪುರ 1 ದುನ್ನತಿಗಾಗಿ ಯತ್ನಿಪುದು॥
ನಿನ್ನಾ ಗೆದ್ದಾ ಕೋಟೆ 1 ಯನ್ನೆಲ್ಲ ಬಿಡುವೆನು 1
ಚೆನ್ನಾಗಿ ನೆರವೀವೆ ನಾನು ॥ ೨

ಅಲ್ಪಬುದ್ಧಿಯ ನಿನ್ನ 1 ತಪ್ಪನು ಮನ್ನಿಸಿ 1 ಯೊಪ್ಪಿಸುವೆನು ಕೊಂಕಣವ॥
ಸ್ವಲ್ಪನು ನೀನಲ್ಲ 1 ದಿಪ್ಪಂತೆ ಮಾಳ್ಪನ 1 ವ್ಮೊಪ್ಪಿಗೆಯಂತೆ ವರ್ತಿಪುದು ೩
ನುಡಿದಿಂತವನನೊಡಂ 1 ಬಡಿಸಿ ತನ್ನಯ ಬಳಿ 1 ಗಡಸುವಂತೆಸಗೆಂದು
ಕಳುಹೆ 11

ನಡೆದು ಶಿವಾಜಿಯಿ । ರ್ಪೆಡೆಗಾಗಿ ಬರುತಿರ್ದ । ನೊಡೆಯನಾಜ್ಞೆಯೊಳು
ಕೃಷ್ಣಾಜೀ ೪

ವಾರ್ಧಕ್ಯ

ಖಾನನಟ್ಟಿದ ಸಂಧಿದೂತನೆಂದವನ ಸ
ನ್ಮಾನದಲಿ ಕುಳ್ಳಿರಿಸಿ ಮತವ ಪೇಳೆಂದೊಡಭಿ
ಮಾನದಿಂ ನಿನ್ನ ತಂದೆಯು ಗೆಳೆಯನಾ ಖಾನ ಮಗನಂತೆ
ನಿನ್ನೊಳೊಲವಿಂ ॥
ನೀನು ಗೆದ್ದುದು ನಿನಗೆ ಕೊಂಕಣವು ಸಹಿತ ಸಂ
ಸ್ಥಾನ ಸಾಮಂತನಾಗಿರು ನೇಹದಿಂ ನಿನಗ
ನೂನ ಸಾಹಾಯ್ಯನಪ್ಪನು ಖಾನನೆಂದೆಂಬ
ವಿವರನು ವಿವರಿಸಲ್ಕೆ ॥೧॥

ರಾಗ-ಸೌರಾಷ್ಟ್ರ, ತ್ರಿವುಡೆತಾಳ

ತಿಳಿದನಿದು ಅಫಜುಲನ ಕುಹಕದ 1 ಬಳಕೆಯಿದಕೆಸಗಲ್ಕೆ ತಕ್ಕುದ 1
ನೊಳಗರಿದು ಶಿವನಂದನಾತನ 1 ಬಳಿಯೊಳಿಂತು ॥೧॥ ಸಂಧಿಮಾತಿನ್ನೇಕೆ
ದೇವರ 1 ಮಂದಿರವ ಮುರಿದವನೊಳಿಮ್ಮಿಯು 1 ಬಾಂಧವರ ನಿರ್ದಯದಿ
ಪೀಡಿಸಿ 1 ಕೊಂದವನೊಳು ॥೨॥ ಆತನನ್ಯಾಯಗಳ ನೋಡಿಯು 1 ಪಾತಕದ
ದೂತತ್ವ ವಹಿಸಿದೆ 1 ಏತಕ್ಕೆ ಸ್ವಜನರನಧರ್ಮದಿ 1 ಘಾತಿಸುತಿಹೇ ॥೩॥
ತಕ್ಕುದಲ್ಲವು ಪರರ ದಾಸ್ಯದೊ 1 ಳಕ್ಕರೆಯು ನೀ ನಿನ್ನ ತಿಳಿದುಕೊ ॥
ರಕ್ಷಿಸಲು ಬಂಧುಗಳ ನಮ್ಮೊಳ 1 ಹೊಕ್ಕು ದುಡಿಯೋ ॥೪॥
ನಮ್ಮ ಹಿರಿಯರ ತೆರದಿ ದೇಶವ 1 ಧರ್ಮವನು ನೆರೆ ಕಾಯ್ದು ಮುಂದಿನ 1
ನಮ್ಮವರಿಗೀಯುವುದೆ ತಿಳಿ ನಿಜ 1 ಧರ್ಮವಿಹುದು ॥೫॥

ರಾಗ-ಕಾಂಭೋದಿ, ಅಷ್ಟತಾಳ

ಹಿತವಾಕ್ಯವೆಂದುದ ಕೇಳಿ 1 ದೃಷ್ಟಿ 1 ಪಥದಲ್ಲಿ ಕೃಷ್ಣಾಜಿ ತಾಳಿ
ಅತಿಯೋಚನಾಬ್ಧಿಯೊಳಾಳಿ 1 ನಿಜ 1 ಮತಿಯಾಗೆ ಸುಜ್ಞಾನಶಾಲಿ ॥
ವಿತಥವಲ್ಲವು ಖಳ 1 ತತಿಯೊಡನವನಿಗ 1 ಹಿತನಾಗಿ ಗೈವೆನ್ನ 1
ಕೃತಿಯಿದು ಪಾಪವು ॥೧॥
ಸಂಶಯವೆಲ್ಲ ತಪ್ಪಿದುದು 1 ಮಾತಿ 1 ನಂಶಾಂಶವೆಲ್ಲವೊಪ್ಪಿದುದು ॥
ಸಂಶುದ್ಧ ಮನವ ಮಾಡಿದುದು 1ಖಳ1 ಸಂಶೋಧನೆಗಳ ಕೇಳುವುದು ॥
ಹಿಂಸಕ ಕಪಟ ನಿ 1 ಸ್ಸಂಶಯವೀ ಸಂಧಿ 1 ಮಾಂಸುಳ ಖಾನ ಖ 1
ಳಾಂಶನಲ್ಲವೆ ನೋಡು ॥೨॥ ಸಂಧಿಯು ನೆವನದಿ ನಿನ್ನ 1 ಖಡ್ಗ । ದಿಂದ
ಕೊಲ್ಲುವ ಯುಕ್ತಿ ತನ್ನ 1 ನಿಂದಾಲೋಚಿಸುವುದು ಮುನ್ನ । ಖಳ 1
ಕಂಧರವನು ತರಿಯಣ್ಣಾ ॥ ಸಂಧಿಗೆ ನೀನವ 1 ನೊಂದಾಗುವುದು
ಕೈದು 1 ಪೊಂದಿಲ್ಲದೆಂಬುದ । ನೆಂದಿಹ ಖಾನನು ॥೩॥
ಆವನೆ ಗುಪ್ತದಿಂದವನು 1 ಬಾಳು । ಕೈದುಗಳನ್ನು ತರುವನು 1 ಸಾದರದಿಂ
ವರ್ತಿಸುವನು 1 ಕಾಲ 1 ಸಾಧಿಸುತುಪಯೋಗಿಸುವನು ॥ ಹಾದಿಯಿದಕೆ
ನೀನೆ 1 ಸಾಧಿಸು ನಿನ್ನಯ 1 ಸೋದರನಂತಿಹೆ ॥ ಹೇ ದಯಾನಿಧಿ ಶಿವ ೪

ಭಾಮಿನಿ

ಒಳಿಕ ಸಂಧಿಗೆ ಸಿದ್ಧನೆನ್ನುತ
ಕಳುಹುತಾ ಕೃಷ್ಣಾಜಿ ಪಂತನ
ಕೊಳುಗುಳಕ್ಕಣಿಮಾಡಿ ಸೈನಿಕರನ್ನು ಗುಪಿತದಲಿ ॥
ತಿಳಿಯದಂದದಿ ಕಡುಗ ಸೀಸಕ
ವೊಳಗವಚವಾ ವ್ಯಾಘ್ರನಖಗಳ
ತಳೆಯುತಿಬ್ಬರು ವೀರರೊಡನೆ ಶಿವಾಜಿ ಹೊರವಂಟ ೧

ಓಜೆಯಿಂ ಕೊಂಬೂದಿದೊಡೆ ನೇ
ತಾಜಿ ಪಾಲ್ಕರಗಲ್ಲಿ ಗುಂಡಿನ
ಸಾಜ ದನಿಗೇಳಿದೊಡೆ ಮೋರೋಪಂತ ಪಿಂಗಳೆಗೇ
ವಾಜಿ ಸೇನಾಸಹಿತ ಬರಲು ಶಿ
ವಾಜಿಯಾಜ್ಞೆಯೆನುತ್ತ ಸೂಚಿಸಿ
ರಾಜತೇಜದಿ ಬಂದ ಸಂಧಿಯ ಶಿಬಿರದೆಡೆಗಾಗಿ ೨

ರಾಗ ಕೇತಾರಗೌಳ, ಅಷ್ಟತಾಳ

ಇತ್ತ ಕೃಷ್ಣಾಜಿಯು । ಬಿತ್ತರಿಸಿದ ಸಂಧಿ । ಗಿತ್ತಲೈತಹ ಶಿವನು ॥
ವ್ಯತ್ಯಾಸವಿಲ್ಲ ನಿ । ಶ್ಯಸ್ತ್ರನು ತಾನೀರ್ವ । ರೊತ್ತಿನೊಳ್ಬೈತರ್ಪನು ೧

ಆಜಾನುಬಾಹು ವಿ । ರಾಜಿತ ಶ್ಯಾಮಲ । ತೇಜಸ್ವಿಯಿಹನಾತನು ॥
ಸಾಜದಿ ಕುಬ್ಜ ಶಿ । ವಾಜಿಯೆನುತ್ತ ಕೃ । ಷ್ಣಾಜಿ ಬಣ್ಣಿಸಲವನ ೨

ಭೀಮಕಾಯನು ಶಕ್ತಿ । ಸಾಮರ್ಥ್ಯವಂತ ಸಂ । ಗ್ರಾಮಶೂರನು ನಾಸಿಹೆ ॥
ಪ್ರೇಮವ ನಟಿಸಿ ನಿ । ರ್ನಾಮವ । ಗೈವುದು ಸಾಮಾನ್ಯ ಕೃತಿಯೆನಗೇ ೩

ಕರವಾಳ ಕಾಣದ । ತೆರದಿ ತಾಳುತ್ತಲಿ । ವರ್ಣರ ಕೂಡಿ ಪೊರಮಟ್ಟನು
ಭರದಿ ಬೇಕಾದಾಗ । ಧುರಕೆ ಹುಸ್ಸೇನನು । ಬರುವುದೆನ್ನುತ ಪೊರಟ ೪

ರಾಗ-ಸೌರಾಷ್ಟ್ರ, ತ್ರಿವುಡೆತಾಳ

ಸಬುದವಿಲ್ಲದೆ ಖಾನ ಸಂಧಿಯ । ಶಿಬಿರವನು ಮೊದಲಾಗಿ ಹೊಕ್ಕನು
ವಿಭವದಿಂ ಮತ್ತಲ್ಲಿಗಾ ಶಿವ । ವಿಭುವು ಬಂದಾ ೧

ಕಾಣುತಲೆ ಖಳನೆದ್ದು ನಿನ್ನನು । ಕಾಣುತಲೆ ನಾ ಧನ್ಯನಾಪ್ತರ ।
ಕಾಣೆ ನಮ್ಮಯ ತೆರದವರ ನೀ । ಕ್ಷೋಣಿಯೊಳಗೇ ೨

ಆಹುದೆನುತ್ತ ಶಿವಾಜಿ ನುಡಿದನು । ಮಹಮದರೊಳನ್ಯರೊಳು ಕಾಣದ
ಸಹಜಗುಣ ನಿನ್ನಲ್ಲಿ ಕಾಣುವೆ । ನಹಹ ಗೆಳೆಯಾ ೩

ನಗುನಗುತ ಹತ್ತಿರಕೆ ಕಪಟದ । ಮಿಗುವ ಕೆಳೆನುಡಿಯಾಡುತಾಡುತ ।
ತೆಗಲೆಯಿಂದಪ್ಪುವೊಡೆ ಬಂದನು । ವಿಗಡನವನು ೪

ಹಿಡಿದನಾಕ್ಷಣ ಶಿವನ ಕಂಕುಳಿ । ನೆಡೆಗೆ ತಲೆಯನು ತುರುಕಿ ಶಕ್ತಿಯೊ
ಳಡಸಿ ಮೋಸದಿ ಬಗೆದನಾಕ್ಷಣ । ಕಡಿದು ಕೊಲಲು ೫
ಕರದಿ ಖಡ್ಗವ ಸೆಳೆದು ಶಿವನೃಪ । ಗೆರಗೆ ಲೋಹದ ಕವಚ ತಡೆದುದು ।
ಭರದೊಳೆಡಗೈ ವ್ಯಾಘ್ರನಖದಿಂ । ದಿರಿದ ಶಿವನು ೬

ಭಾಮಿನಿ

ಹೊಟ್ಟೆಗಿರಿದಾ ಕ್ಷಣವೆ ಕರುಳಿನ
ತೊಟ್ಟು ಹೊರಟಿತು ಬಲದ ಕೈಯಿಂ
ತೊಟ್ಟನವನೆದೆಯನ್ನು ಬಿಚ್ವಾಯುಧದಿ ಬಿಚ್ಚಿದನು ।
ದುಷ್ಟನಫಜುಲಖಾನ ನೆಲದೊಳು
ಪಟ್ಟೊಡನೆ ಮಾರಾಂತರಿಬ್ಬರ
ನಟ್ಟಿದನು ಯಮಪುರಕೆ ತನ್ನಯ ಖಡ್ಗಧಾರೆಯಲಿ ೧

ರಾಗ-ಶಂಕರಾಭರಣ, ಏಕತಾಳ

ಬಳಿಕಾಕ್ಷಣದೆ ಶಿವಾಜಿಯು ಸನ್ನೆಯು । ನೆಲೆಯಿಂ ಕೊಂಬಿನ ಗುಂಡಿನ ಶಬ್ದವು।
ಮೊಳಗಲು ಮೋರೋಪಂತರು ಪೊರಟರು । ಬಳಿಯೊಳೆ ಯೋಧರ
ಬಳಗವ ಕೂಡುತ ।ಏನನೆಂಬೆ । ಸಾಹಸ । ಏನನೆಂಬೇ ॥೧॥
ಫಕ್ಕನೆ ಮಡಿಯಲು ಠಕ್ಕಿನ ಖಾನನು । ಮಿಕ್ಕಲು ಭೀತಿಯು ।
ಮಿಕ್ಕಿನ ಖಳರೊಳು । ಸೊಕ್ಕಿನ ಹುಸ್ಸೇನಾಖ್ಯನು ಸಹಿಸದೆ । ಹೊಕ್ಕಿರಿಯಲು
ಬರ । ಲುಕ್ಕುತ ಶಿವನು । ಏನನೆಂಬೇ । ಸಾಹಸ । ಏನನೆಂಬೇ ॥೨॥

ರಾಗ-ಪಂತುವರಾಳಿ, ಮಟ್ಟೆತಾಳ

ಎಲೊ ಮದಾಂಧ ಕೇಳು ನಿನಗೆ । ತಲೆಯು ಭಾರವಾದುದೇನೊ ।
ಕೊಳುಗುಳಕ್ಕೆ ನಿಂದೆಯಾದೊ । ಡಳಿವನೈದುವೆ ॥ ಕೆಲಕೆ ನೋಡು ಬಿದ್ದ ನಿನ್ನ
ಬಳಗದೊಡೆಯನವನ ಗತಿಯ । ತಳೆವೆಯಾದೊ ಡೆನ್ನೊಳೀಗ
ಹಳಚು ಬೇಗನೆ ॥೧॥
ಎಂದೊಡೆಂದ ಭೀತಿಯಿರಲು । ಮುಂದೆ ನಾನು ಬಹೆನೆ ಸಮರ ।
ದಂದ ಬಲ್ಲೆಯಾದೊಡೀಗ । ನಿಂದು ನೋಡೆಲೋ ॥ ಕೊಂದ
ರೀತಿಯೆನ್ನೊಳಿನಿತು । ಹಂದದಿಂದು ಶಕ್ತಿಯಿಂದ । ದ್ವಂದ್ವಯುದ್ಧ
ಮಾಡಿ ನಿನ್ನ । ಕೊಂದು ಬಿಸುಡುವೆ ॥೨॥ ಬಲ್ಲೆ ನಾನು ನ್ಯಾಯ ಕಪಟ ।
ವೆಲ್ಲವನ್ನು ತಕ್ಕಸಮಯ । ದಲ್ಲಿ ತೋರ್ಪೆ ಕಪಟಿಯಿವನ । ನಿಲ್ಲಿ ಕೆಡಹದೆ ॥
ನಿಲ್ಲು ನಿನ್ನ ಬಳಗ ಸಹಿತ । ಕೊಲ್ಲಲಿದುವೆ ಸಮಯವೆನಲು ।
ಮಲ್ಲ ಹುಸ್ಸೇನ ಕೋಪ । ದಲ್ಲಿ ಪೇಳ್ದನು ॥೩॥

ರಾಗ-ಕೇತಾರಗೌಳ, ಝಂಪೆತಾಳ

ಎಲವೊ ಕಾಫಿರ ಹುಡುಗ । ತಿಳಿಯೆಯಾ ಇಸ್ಲಾಮು ।
ಕುಲದವನು ನಾನೆಂಬುದನ್ನು ।
ಚಲದಿ ಭುಜಬಲದಿ ಭೂ । ವಲಯವನೆ ಗದರಿಸುತ ।
ನೆಲೆಯನತಿ ವಿಸ್ತರಿಸದಿಹವೇ ॥೧॥

ಇಲ್ಲಿ ಮೊದಲೆಲ್ಲರೂ ಕಾಫಿರರು ನೋಡೀಗ । ಳಿಲ್ಲಿಯಿಸ್ಲಾಮು ಪಸರಿಸಿದೇ ॥
ನಿಲ್ಲದೀ ಜೀವವನು । ಚೆಲ್ಲಿಯಾದರು ನಿಮ್ಮ । ನೆಲ್ಲ ಪರಿವರ್ತಿಸದೆ ಬಿಡೆವು ೨
ಎನಲೆಂದ ಶಿವರಾಯ । ಮನವೊಲಿಯೆ ಬೋಧಿಸುತ ।
ಜನವ ಪರಿವರ್ತಿಪುದು ಸಹಜ ।
ಜನಹಿಂಸೆ ಬಲವಂತ । ವನು ಕುರುಡು ನಂಬುಗೆಯ ।
ನನುಗೊಳಿಸೆ ಬಿಡೆನು ನಿಶ್ಚಯವು ॥ ೩
ಪರರೆಂಬರಿಲ್ಲೆಮಗೆ । ನರ ಪಕ್ಷಿ ಪಶುಗಳನು । ಪರಿಗಣಿಸುತಿಹೆವು ಭಾರತದಿ ।
ಪರಮಭಕ್ತಿಯ ಬಿಡೆವು । ಪರಮತವನಾಂತರೂ ।
ಮರೆವುದೈ ರಾಷ್ಟ್ರೀಯತೆಯನು ॥ ೪

ಭಾಮಿನಿ

ಮಾತಿನೊಳು ಫಲವಿಲ್ಲವಿದೊ ಸಂ
ಘಾತಿಯಾಗಲೆನುತ್ತ ಖಡ್ಗದೊ
ಳಾ ತಡವೆ ಹುಸ್ಸೇನಖಾನನು ಭರದಿ ಕಾದಿದನು ॥
ಪಾತಕವನತಿ ಪುಣ್ಯ ಸದೆಯುವ
ರೀತಿಯಿಂದಲೆ ವೀರ ಶಿವನೃಪ
ನಾತನನು ಖಡ್ಗದಲಿ ಕಡಿದುರುಳಿಸಿದನಾ ಕ್ಷಣದಿ ॥ ೧

ವಾರ್ಧಕ್ಯ

ಅನ್ನೆಗಂ ನೇತಾಜಿ ಬಾಜಿ ಮೋರೋಪಂತ
ರುನ್ನತದ ಸಾಮರ್ಥ್ಯದಿಂದುಳಿದ ದುಷ್ಟರನು
ನಿರ್ನಾಮಮಂ ಮಾಡೆ ಸುಮನಸರು ಕೊಂಡಾಡಿ
ಹಾಡಿದರು ಶಿವನೃಪನನು ।
ತನ್ನ ಜಯವೃತ್ತಾಂತಮಂ ರಾಜದುರ್ಗಕ್ಕೆ
ತನ್ನ ತಾಯಿಗೆ ಕಳುಹಿ ವೈರಿ ಕರಿ ಹರಿ ಶಸ್ತ್ರ
ವನ್ನು ವಶಗೈದು ಸತ್ತವರೆಲ್ಲರುತ್ತರ ಕ್ರಿಯೆಗಳಂ ಮಾಡಿಸಿದನು ॥

ಕಂದ 11 ಭಾರತ ಧರ್ಮಕೆ ಜನತೆಗೆ
ಭಾರತ ಸಂಸ್ಕೃತಿಗೆ ವಿಮಲ ಸಾಹಿತ್ಯಕ್ಕಂ
ಭಾರತ ಮಾತೆಗೆ ಜಯವೆಂ
ದಾರತಿಯನ್ನೆತ್ತಿ ಬೆಳಗಿ ನಮಿಸಿದರೆಲ್ಲರ್ ೧

ಮತ್ತೇಭವಿಕ್ರೀಡಿತ

ತಿರೆಯೆಲ್ಲಂ ಬೆಳೆಯಿಂದೆ ಪೆಂಪುವಡೆದೊಪ್ಪುತ್ತಿರ್ಕೆ ಸತ್ಕಾಲದೊಳ್
ಬರಿಸಂ ಬರ್ಕೆ ಪಶೂತ್ಕರಂ ಕುಡುಗೆ ನಲ್ಪಾಲಂ ಕೊಡಂದುಂಬೆಯೆ
ಲ್ಲರೊಳಂ ರಾಷ್ಟ್ರದ ಭಕ್ತಿಯುದ್ಯಮಗುಣಂ ಸಂಘಾನುರಾಗಂಗಳೆ
ಳ್ಚರುಗೊಳ್ಪಿಂದಿದು ರಾಮರಾಜ್ಯಮೆನುತಿರ್ಕೆತ್ತಂ ಶುಭಂ ಮಂಗಳಂ

ಪಾತ್ರವರ್ಗ

ನಂ.	ಪಾತ್ರಗಳು	ಪದ (ಮಾತು)
1.	ಶಿವಾಜಿ ಮಹಾರಾಜ	29
2.	ಬಿಜಾಪುರ ಸುಲ್ತಾನ ರಾಣಿ	5
3.	ಅಫಜುಲಖಾನ	26
4.	ಹುಸ್ಸೇನಖಾನ	9
5.	ಚಾರಕ	5
6.	ಸಾಧು ಸಜ್ಜನರು	5
7.	ಬಾಜೀಪ್ರಭು ಮೋರೋಪಂತ	5
8.	ತಾನಾಜಿ	2
9.	ಜೀಜಾಬಾಯಿ	1
10.	ಕೃಷ್ಣಾಜೀ ಪಂತ	7
	ಸ್ತುತಿ, ಮಂಗಲ ಪದಗಳು	8
	ಒಟ್ಟು	102

ಟಿ. ಕೇಶವ ಭಟ್ಟರ ಪ್ರಕಟಿತ ಕೃತಿಗಳು

೧.	ಭಾಷಾದೀಪಿಕೆ–ವ್ಯಾಕರಣ ಛಂದಸ್ಸು, ಅಲಂಕಾರ	1956–1993
೨.	ಭಾಷಾಭಾಸ್ಕರ–ವ್ಯಾಕರಣ ಮತ್ತು ಪ್ರಬಂಧ	1956
೩.	ಸತ್ತ್ವಾವಲೋಕನ ಕಾವ್ಯಂ–ರಾಜ್ಯ ಬಹುಮಾನಿತ ಚಂಪೂಕಾವ್ಯ	1959
೪.	ತೂಗುದೀವಿಗೆ–ಧ್ವನಿ ಪ್ರಧಾನ ಕವನ ಸಂಕಲನ	1961
೫.	ಪಂಚವಟಿ-(ಸಂ) ತುಳು ಯಕ್ಷಗಾನ ಕೃತಿ	1968
೬.	ಸಂಶೋಧನ ರತ್ನಮಾಲಿಕೆ–ಮೈ. ವಿ. ವಿ. (೧೯೭೨) ಬಹುಮಾನಿತ	1969
೭.	ರಾಮವಿಜಯ ಕಾವ್ಯ–(ಸಂ) ಭಾರತೀಯ ಜ್ಞಾನಪೀಠ ಪ್ರಕಾಶನ	1969
೮.	ಪ್ರಬಂಧಮಾರ್ಗ (ಸಹವಿರಚಿತ)	1970
೯.	ಕಾವ್ಯಪದಮಂಜರಿ–ಕನ್ನಡ–ಕನ್ನಡ ಶಬ್ದಕೋಶ (ಸಹವಿರಚಿತ)	1970
೧೦.	ಹಾಡಿನ ಚೂಡಾಮಣಿ–ದ. ಕ. ಜಿಲ್ಲೆಯ ಜನಪದ ಗೀತಗಳು	1971
೧೧.	ಗೋವಿನ ಕತೆ ಹಾಡು (ಸಂ) ಪರಿಷ್ಕೃತ ವಿಸ್ತೃತ ಪ್ರತಿ	1971
೧೨.	ಕುಮಾರವ್ಯಾಸ (ಐ.ಬಿ.ಎಚ್.) ಪ್ರಕಾಶನ	1971
೧೩.	ಹವ್ಯಕ ಪದಸಂಚಯ–ಕಂದ ಪದ್ಯಾತ್ಮಕ ಸಟೀಕಾ ನಿಘಂಟು	1972–1982
೧೪.	ದಿಲೀಪ–ಭಾರತ ಭಾರತಿ ಪುಸ್ತಕ ಸಂಪದ	1973
೧೫.	ಕಾರ್ತಿಕೇಯ	1975
೧೬.	ವಿಶ್ವಕರ್ಮ ” ”	1975
೧೭.	ಪಾರ್ವತಿ, ಗಾಂಧಾರಿ ” ”	1978, 1979
೧೮.	ಮುದ್ದಣ ಪ್ರಶಸ್ತಿ ಗ್ರಂಥ (ಸಂಪಾದಿತ) ” ”	1975
೧೯.	ಮಣಿಹಾರ–ಸರಸ ಸಾಹಿತ್ಯ ವೈಚಾರಿಕ ಪ್ರಬಂಧ ಸಂಕಲನ	1975
೨೦.	ವಡ್ಡಾರಾಧನೆ–ಮೂಲ ಸಹಿತ ಗದ್ಯಾನುವಾದ, ಕ.ಸಾ.ಪ.	1976
೨೧.	ವಡ್ಡಾರಾಧನೆ–ಐ.ಬಿ.ಹೆಚ್. ಪ್ರಕಾಶನ (ಭಾಗಲೇಖನ)	1977
೨೨.	ಶ್ರೀ ಟಿ. ಕೇಶವ ಭಟ್ಟರು–ಲಘು ಪರಿಚಯ (ಸಂ: ಟಿ.ಕೆ.ರಘುಪತಿ)	1980
೨೩.	ಶ್ರೀ ರಾಘವೇಂದ್ರ ಭಾರತಿ ಸ್ವಾಮಿಗಳು–ಜೀವನ, ಕಾರ್ಯ	1981
೨೪.	ಹವ್ಯಕರ ಶೋಭಾನೆಗಳು–ಸಂಕಲನ (ಅಕಾಡೆಮಿ ಬಹುಮಾನಿತ)	1986
೨೫.	ಶ್ರೀಗುರುಚರಿತ್ರಾಮೃತಂ (ಭಾಮಿನಿಷಟ್ಪದಿ) ಕಾವ್ಯ	1990
೨೬.	ಕನ್ನಡ ಪ್ರಾಚೀನ ಸಾಹಿತ್ಯ ಲಕ್ಷಣಗಳು–ಮರುನೋಟ	1992
೨೭.	ಕನ್ನಡ–ಕನ್ನಡ ಸುವರ್ಣಕೋಶ	1994
೨೮.	ನವೀನ ವ್ಯಾಕರಣ–ಪ್ರಬಂಧ	1995
೨೯.	ರಾಷ್ಟ್ರಭಕ್ತಿ ಮಾನಸ	1996
೩೦.	ದ. ಕ. ಜಿಲ್ಲೆಯ ಜನಪದ ಗೀತಗಳು (ಮಹಾ ಪ್ರಬಂಧ)	1996

ಪ್ರೊ|| ಟಿ. ಕೇಶವ ಭಟ್ಟ,
ಕವಿಶೇಖರ, ನುಡಿರೂಹ ರೂವಾರಿ (ಬಿರುದು),
ನಿವೃತ್ತ ಕನ್ನಡ ಪ್ರಾಧ್ಯಾಪಕ, ಲೇಖಕ, ರಾಜ್ಯ ಬಹುಮಾನಿತ ಚಂಪೂಕವಿ (ಕವಿಕನೀಯಂ).
ವಿ. ವಿ. ಮತ್ತು ಯು. ಜಿ. ಸಿ. ಮಾನಿತ ಸಂಶೋಧಕ.
ಭಾರತೀಯ ಜ್ಞಾನಪೀಠ ಪ್ರಕಾಶಿತ ಗ್ರಂಥ ಸಂಪಾದಕ
ಜಾನಪದ, ಯಕ್ಷಗಾನ, ಗಮಕ ಕಲಾವಿದ.

ಮಾತೃಭೂಮಿ ಮತ್ತು ಪುಣ್ಯಭೂಮಿ [illegible]ವ ಭೂಭಾಗ, ಅಲ್ಲಿಯ ಧರ್ಮ, ಸಂಸ್ಕೃತಿ, ಭಾಷೆ, ಸಾಹಿತ್ಯ ಇವನ್ನೆಲ್ಲ ತನ್ನವೆಂದು ಗೌರವಿಸುವ ಜನಪರಂಪರೆ ಇದ್ದರೆ ಅದು ರಾಷ್ಟ್ರ. ಅದರ ಅಭ್ಯುದಯಕಾರಕ ಭಕ್ತಿಭಾಗೀರಥಿಯ ಉದ್ಗಮ— ರಾಷ್ಟ್ರಭಕ್ತಿ ಮಾನಸ.

** ** **

ಪರಮ ಪರಿಶುದ್ಧ ಅನಾದಿ ಜೀವನಮೌಲ್ಯವೇ ಧರ್ಮ, ಅದೇ ಹಿಂದುತ್ವ.

** ** **

ಧರ್ಮವು ಅಭ್ಯುದಯ ನಿಃಶ್ರೇಯಸಗಳಿಗೆ ಸೋಪಾನ. ನಿಃಶ್ರೇಯಸಕ್ಕಾಗಿ ಭಗವದ್ಭಕ್ತಿ; ಅಭ್ಯುದಯಕ್ಕಾಗಿ ರಾಷ್ಟ್ರಭಕ್ತಿ. ಇವೆರಡೂ ಧರ್ಮಾಚರಣೆಗಳು.

** ** **

ಹಿಂದುತ್ವ ಎಂದೊಡನೆ ಅದನ್ನು ಜಾತೀಯತೆ ಎಂದುಕೊಂಡು ಮುಖ ಸಿಂಡರಿಸಿ, ಬಾಯ್ಗೆ ಬಂದಂತೆ ಹಳಿವವರು ತಮ್ಮ ಭಾಷಣದ ಕೊನೆಗೆ ಜೈಹಿಂದ್ ಎನ್ನುತ್ತಾರೆ. 'ಹಿಂದುತ್ವಕ್ಕೆ ಜಯವಾಗಲಿ' ಎಂದೇ ಅದರ ಅರ್ಥ.

** ** **